BAJAJ FINSERV

## ಪ್ರಮುಖ ನಿಯಮ ಮತ್ತು ಷರತ್ತುಗಳು (ಎಂಐಟಿಸಿ)

ಎಂಐಟಿಸಿ ಯಲ್ಲಿ ನಮೂದಿಸಿರುವ ಪ್ರಮುಖ ನಿಯಮ ಮತ್ತು ಷರತ್ತುಗಳನ್ನು ಮಂಜೂರಾತಿ ಪತ್ರ. ಲೋನ್ ಒಪ್ಪಂದ ("**ಲೋನ್ ಒಪ್ಪಂದ**"), ಟಾಪ್ ಅಪ್ ಲೋನ್ ಅನುಬಂಧ, ವಿತರಣೆ ಪತ್ರ ಮತ್ತು/ಅಥವಾ ಯಾವುದೇ ಇತರೆ ಡಾಕ್ಯುಮೆಂಟ್ಗಳಲ್ಲಿ (ಅವನ್ನು ಒಟ್ಟಾರೆಯಾಗಿ "**ಲೋನ್ ಡಾಕ್ಯುಮೆಂಟ್‌ಗಳು**" ಎನ್ನಲಾಗುವುದು) ವಿವರಿಸಿರುವ ಹಾಗೂ ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (**"ಬಿಎಚ್‌ಎಫ್‌ಎಲ್"** ಅಥವಾ "**ಸಾಲದಾತ**") ಮತ್ತು ಸಾಲಗಾರ ("**ಸಾಲಗಾರ**" ಅಥವಾ "**ಗ್ರಾಹಕ**") ಇಬ್ಬರೂ ಒಪ್ಪಿರುವ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ರೂಪಿಸಲಾಗಿದೆ.

ಈ ಎಂಐಟಿಸಿಯನ್ನು ಲೋನ್ ಡಾಕ್ಯುಮೆಂಟ್‌ಗಳ ನಿಯಮ ಮತ್ತು ಷರತ್ತುಗಳ ಜೊತೆಯಲ್ಲಿ ಓದಲೇಬೇಕು. ಸಾಲಗಾರ ಪಡೆದ ಲೋನನ್ನು, ಲೋನ್ ಡಾಕ್ಯುಮೆಂಟ್‌ಗಳ ಆಧಾರದಲ್ಲಿ ನಿರ್ವಹಿಸಲಾಗುತ್ತದೆ. ಇಲ್ಲಿ ಸೂಚಿಸಲಾದ ಎಂಐಟಿಸಿ ಮತ್ತು ಲೋನ್ ಡಾಕ್ಯುಮೆಂಟ್‌ಗಳ ನಡುವೆ ಯಾವುದೇ ತಕರಾರು ಬಂದಾಗ, ಲೋನ್ ಡಾಕ್ಯುಮೆಂಟ್‌ಗಳ ನಿಯಮ ಮತ್ತು ಷರತ್ತುಗಳು ಮೇಲುಗೈ ಸಾಧಿಸುತ್ತವೆ. ನಾವು ನೀಡುವ ಗ್ರಾಹಕ ಲಾಗಿನ್ ಪೋರ್ಟಲ್ ಕ್ರೆಡೆನ್ಶಿಯಲ್‌ಗಳನ್ನು (ಯೂಸರ್ ಐಡಿ ಮತ್ತು ಪಾಸ್ವರ್ಡ್) ಬಳಸುವ ಮೂಲಕ ಗ್ರಾಹಕರು ಲೋನ್ ಒಪ್ಪಂದವನ್ನು ಅಕ್ಸೆಸ್ ಮಾಡಬಹುದು. ಒಂದು ವೇಳೆ ಗ್ರಾಹಕರು  ಪೋರ್ಟಲ್‌ನಲ್ಲಿ ಲೋನ್ ಒಪ್ಪಂದವನ್ನು ಅಕ್ಸೆಸ್ ಮಾಡಲು ಸಾಧ್ಯವಾಗದಿದ್ದರೆ, ಲೋನ್ ಒಪ್ಪಂದದ ಪ್ರತಿಗಾಗಿ ಗ್ರಾಹಕರು ಮನವಿ ಸಲ್ಲಿಸಬಹುದು. ಆನಂತರ ಲೋನ್ ಒಪ್ಪಂದದ ಫೋಟೋಕಾಪಿಯನ್ನು ತಲುಪಿಸಲಾಗುವುದು.

**ಅಪ್ಲಿಕೇಶನ್ ಸಂಖ್ಯೆ.:** ________________________

**ಲೋನಿನ ಸ್ವರೂಪ:** ☐ ಭದ್ರತಾ ಲೋನ್ ☐ ಭದ್ರತೆ ರಹಿತ ಲೋನ್

**ಲೋನ್ ವಿಧ:** ☐ ಹೊಸ/ ಖರೀದಿ ☐ ಬಿಟಿ ☐ ಬಿಟಿ + ಟಾಪ್ ಅಪ್ ☐ ಟಾಪ್ ಅಪ್

1. **ಲೋನ್ ಮೊತ್ತ:**

2. **ಬಡ್ಡಿ ಪ್ರಕಾರ**

   ☐ ಫ್ಲೋಟಿಂಗ್: ☐ ಬಿಹ್ಫ್ಲ ಫ್ಲೋಟಿಂಗ್ ರೆಫರೆನ್ಸ್ ರೇಟ್ (ಎಫ್‌ಆರ್‌ಆರ್ ) ☐ ರೆಪೋ ರೇಟ್ ಅಥವಾ ☐ ರೆಪೋ ಬಾಹ್ಯ ಬೆಂಚ್‌ಮಾರ್ಕ್ ಲಿಂಕ್ಡ್ ಲೆಂಡಿಂಗ್ ದರ ("ಆರ್‌ಇಬಿಎಲ್‌ಆರ್")

   ☐ ಫಿಕ್ಸೆಡ್

   ☐ ಡ್ಯುಯಲ್ ದರ (ಫಿಕ್ಸೆಡ್ + ಫ್ಲೋಟಿಂಗ್)



⊗ಎಲ್ಲಾ ಅರ್ಜಿದಾರರು/ ಸಹ ಅರ್ಜಿದಾರರು ಸಹಿ ಮಾಡಬೇಕು

**ಬಡ್ಡಿ ದರ:**

- ಫ್ಲೋಟಿಂಗ್ ದರ:

| | |
|---|---|
| ಫ್ಲೋಟಿಂಗ್‌ಗಾಗಿ | ____ % ವರ್ಷಕ್ಕೆ (ಎಫ್ಆರ್ಆರ್ / ರೆಪೋ / ಆರ್‌ಇಬಿಎಲ್ಆರ್ ___% +/- ___% ಸ್ಪ್ರೆಡ್) |

- ಡ್ಯುಯಲ್ ದರ (ಫಿಕ್ಸೆಡ್ + ಫ್ಲೋಟಿಂಗ್):

| | |
|---|---|
| ಡ್ಯುಯಲ್ ದರಕ್ಕಾಗಿ (ಫಿಕ್ಸೆಡ್ + ಫ್ಲೋಟಿಂಗ್) | ಫಿಕ್ಸೆಡ್: ____% ಪ್ರತಿ ವರ್ಷಕ್ಕೆ, ____ ತಿಂಗಳ ಕಾಲಾವಧಿಗೆ, ನಂತರ |
| | ಫ್ಲೋಟಿಂಗ್: ____ % ವರ್ಷಕ್ಕೆ (ಎಫ್ಆರ್ಆರ್ / ರೆಪೋ / ಆರ್‌ಇಬಿಎಲ್ಆರ್ ___% +/- ___% ಸ್ಪ್ರೆಡ್) |

ಫ್ಲೋಟಿಂಗ್ ದರದ ಅವಧಿ ಪ್ರಾರಂಭವಾದ ದಿನಾಂಕದಂದು ಅನ್ವಯವಾಗುವ ಬಿಎಚ್‌ಎಫ್ಎಲ್ ಎಫ್ಆರ್ಆರ್, ರೆಪೋ ದರ ಮತ್ತು/ಅಥವಾ ಆರ್‌ಇಬಿಎಲ್ಆರ್ ಆಧಾರದ ಮೇಲೆ ವಾರ್ಷಿಕ ಬಡ್ಡಿ ದರವನ್ನು ಲೆಕ್ಕ ಹಾಕಲಾಗುತ್ತದೆ ಎಂಬುದನ್ನು ಸಾಲಗಾರರು ಒಪ್ಪುತ್ತಾರೆ.

**ಮೊರಟೋರಿಯಂ ಅಥವಾ ಸಬ್ಸಿಡಿ:**

**ಬಡ್ಡಿಯನ್ನು ಮರುಹೊಂದಿಸಿದ ದಿನಾಂಕ (ಯಾವುದಾದರೂ ಇದ್ದಲ್ಲಿ):**

**ಬಡ್ಡಿ ದರದ ಬದಲಾವಣೆ ಬಗ್ಗೆ ತಿಳಿಸುವ ವಿಧಾನಗಳು:** ಬಿಎಚ್‌ಎಫ್ಎಲ್ ಎಫ್ಆರ್ಆರ್ ಅಥವಾ ಬಾಹ್ಯ ಮಾನದಂಡಗಳು (ಬಾಹ್ಯ ಮಾನದಂಡ ಲಿಂಕ್ ಮಾಡಿದ ಲೋನ್‌ಗಳಿಗೆ) ಅಥವಾ ಆರ್‌ಇಬಿಎಲ್ಆರ್ ಅಥವಾ ಆಂತರಿಕ ಪಾಲಿಸಿಗಳಲ್ಲಿನ ಬದಲಾವಣೆಗಳು ಅಥವಾ ಶಾಸನಬದ್ಧ ಅಗತ್ಯತೆಗಳು ಅಥವಾ ಒಪ್ಪಂದದ ಅಡಿಯಲ್ಲಿ ಲೋನ್ ವಿತರಿಸಿದ ನಂತರ ಸಾಲದಾತನಿಗೆ ಅಗತ್ಯವಿರುವ ಯಾವುದೇ ಡಾಕ್ಯುಮೆಂಟ್‌ಗಳನ್ನು ಒದಗಿಸಲು / ಕಾರ್ಯರೂಪಕ್ಕೆ ತರಲು ಸಾಲಗಾರ ವಿಳಂಬ ಮಾಡುವುದು ಸೇರಿದಂತೆ ಯಾವುದಾದರೂ ಡೀಫಾಲ್ಟ್ ಸಂಭವಿಸುವುದು - ಇಂತಹ ಯಾವುದೇ ಕಾರಣಕ್ಕಾಗಿ ಲೋನ್ ಅವಧಿಯಲ್ಲಿನ ಯಾವುದೇ ಸಮಯದಲ್ಲಿ ಹಾಗೂ ಕಾಲಕಾಲಕ್ಕೆ ಬಡ್ಡಿ ದರವನ್ನು ಏರಿಸುವ ಮತ್ತು ಇಳಿಸುವ ಅಧಿಕಾರವನ್ನು ಬಿಎಚ್‌ಎಫ್ಎಲ್ ಹೊಂದಿರುತ್ತದೆ. ಬಡ್ಡಿ ದರದಲ್ಲಿನ ಯಾವುದೇ ಪರಿಷ್ಕರಣೆಯು ನಿರೀಕ್ಷಿತವಾಗಿ ಅನ್ವಯವಾಗುತ್ತದೆ. ಎಲ್ಲಾ ಫ್ಲೋಟಿಂಗ್ ಬಡ್ಡಿ ದರದ ಪ್ರಕಾರದ ಇತರ ಅಂಶಗಳನ್ನು ಮೂರು ವರ್ಷಗಳಿಗೊಮ್ಮೆ ಪರಿಶೀಲಿಸಬಹುದು ಮತ್ತು ಅಗತ್ಯವಿದ್ದರೆ ಬದಲಾಯಿಸಬಹುದು. ಬಿಎಚ್‌ಎಫ್ಎಲ್, ಸಾಲಗಾರನ ನೋಂದಾಯಿತ ವಿಳಾಸಕ್ಕೆ ಪತ್ರ ಕಳುಹಿಸುವ ಮೂಲಕ, ನೋಂದಾಯಿತ ಇ-ಮೇಲ್ ಐಡಿಗೆ ಮೇಲ್ ಕಳಿಸುವ ಮೂಲಕ/ ನೋಂದಾಯಿತ ಮೊಬೈಲ್ ನಂಬರ್‌ಗೆ ಮೆಸೇಜ್ ಮಾಡುವ ಮೂಲಕ /ಅಥವಾ ತನ್ನ ವೆಬ್‌ಸೈಟ್‌ನಲ್ಲಿ ಅಪ್ಡೇಟ್ ಮಾಡುವ ಮೂಲಕ ಬಡ್ಡಿ ದರದಲ್ಲಾದ ಬದಲಾವಣೆಯ ಬಗ್ಗೆ ತಿಳಿಸುತ್ತದೆ. ಮೇಲ್ಕಂಡ ಯಾವುದೇ ಎರಡು ಪರ್ಯಾಯ ವಿಧಾನಗಳ ಮೂಲಕ ಸಾಲಗಾರರಿಗೆ ಮಾಹಿತಿ ನೀಡಿದರೆ ಸಾಕಾಗುತ್ತದೆ. ಅಂತಹ ಬದಲಾವಣೆಯು ಸಾಲಗಾರನಿಗೆ ಅನಾನುಕೂಲ ಎನಿಸಿದರೆ, ಸಾಲಗಾರನರು ೬೦ ದಿನಗಳಲ್ಲಿ, ಯಾವುದೇ ಸೂಚನೆಯಿಲ್ಲದೆ ಯಾವುದೇ ಹೆಚ್ಚುವರಿ ಶುಲ್ಕ ಅಥವಾ ಬಡ್ಡಿ ಪಾವತಿಸದೆ ಲೋನ್ ಅಕೌಂಟನ್ನು ಫೋರ್‌ಕ್ಲೋಸ್ ಮಾಡಬಹುದು.

ವಾರ್ಷಿಕ ಬಡ್ಡಿ ದರದಲ್ಲಿ ಯಾವುದೇ ಪರಿಷ್ಕರಣೆಯ ಸಂದರ್ಭದಲ್ಲಿ, ಬಡ್ಡಿ ದರ ಮರುಹೊಂದಿಸುವ ಸಮಯದಲ್ಲಿ ನಿಮ್ಮ ಲೋನ್ ಅನ್ನು ಫ್ಲೋಟಿಂಗ್ ದರದಿಂದ ಫಿಕ್ಸೆಡ್ ದರಕ್ಕೆ ಮತ್ತು ಹಾಗೆಯೇ ವಿಲೋಮವಾಗಿ ಬದಲಾಯಿಸುವ ಆಯ್ಕೆಯನ್ನು ನೀವು ಹೊಂದಿದ್ದೀರಿ. ಫ್ಲೋಟಿಂಗ್ ಲೋನ್‌ಗಳನ್ನು ಫಿಕ್ಸೆಡ್ ದರದ ಲೋನ್‌ಗೆ ಬದಲಾಯಿಸಲು, ಬಾಕಿ ಅಸಲಿನ 1% (ಜಿಎಸ್‌ಟಿ ಹೊರತುಪಡಿಸಿ) ವರೆಗೆ

ಪರಿವರ್ತನಾ ಶುಲ್ಕ + ವಿತರಣೆಯಾಗದ ಲೋನ್ ಮೊತ್ತ / ಫ್ಲೆಕ್ಸಿ ಮಿತಿಯನ್ನು ವಿಧಿಸಲಾಗುತ್ತದೆ ಮತ್ತು ಅಂತಹ ಬದಲಾವಣೆಯನ್ನು ಮಾಡಲು ಅದನ್ನು ಮುಂಗಡವಾಗಿ ಪಾವತಿಸಬೇಕಾಗುತ್ತದೆ. ಹೆಚ್ಚುವರಿಯಾಗಿ, ಫ್ಲೋಟಿಂಗ್ ಬಡ್ಡಿ ದರದಿಂದ ಫಿಕ್ಸೆಡ್ ಬಡ್ಡಿ ದರಕ್ಕೆ ಪರಿವರ್ತನೆಯ ನಂತರ, ಅನ್ವಯವಾಗುವ ಫಿಕ್ಸೆಡ್ ವಾರ್ಷಿಕ ಬಡ್ಡಿ ದರವು ಪರಿವರ್ತನೆಗೆ ಮುಂಚಿತವಾಗಿ ಅನ್ವಯವಾಗುವ ಫ್ಲೋಟಿಂಗ್ ವಾರ್ಷಿಕ ಬಡ್ಡಿ ದರಕ್ಕಿಂತ 200 ಬಿಪಿಎಸ್ ಅಂದರೆ ವಾರ್ಷಿಕ 2% (ಎರಡು ಶೇಕಡಾ) ಅಧಿಕವಾಗಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ. ಅರ್ಜಿದಾರ(ರಿ)ನಿಂದ ಲಿಖಿತವಾಗಿ ಅಂತಹ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ 30 (ಮೂವತ್ತು) ದಿನಗಳ ಒಳಗೆ ಪರಿವರ್ತನೆ ಜಾರಿಯಲ್ಲಿರುತ್ತದೆ ಮತ್ತು ಫಿಕ್ಸೆಡ್‌ನಿಂದ ಫ್ಲೋಟಿಂಗ್ ಮತ್ತು/ಅಥವಾ ಹಾಗೆಯೇ ವಿಲೋಮವಾಗಿ ಬದಲಾವಣೆ ಮಾಡುವ ಆಯ್ಕೆಯು ಸಂಪೂರ್ಣ ಲೋನ್ ಅವಧಿಯಲ್ಲಿ ಗರಿಷ್ಠ 3 ಬಾರಿ ಲಭ್ಯವಿರುತ್ತದೆ. ಇದಲ್ಲದೆ, ಫಿಕ್ಸೆಡ್ ಬಡ್ಡಿ ದರದ ಪ್ರಕಾರದ ಟರ್ಮ್ ಲೋನ್‌ಗಳು 'ಮುಂಗಡ- ಪಾವತಿ ಶುಲ್ಕಗಳು' ಕೋಷ್ಟಕದಲ್ಲಿ ವ್ಯಾಖ್ಯಾನಿಸಿರುವಂತೆ ಭಾಗಶಃ ಮುಂಗಡ ಪಾವತಿ ಮತ್ತು ಫೋರ್‌ಕ್ಲೋಸರ್ ಶುಲ್ಕಗಳನ್ನು ಆಕರ್ಷಿಸುತ್ತವೆ ಎಂಬುದನ್ನು ದಯವಿಟ್ಟು ಗಮನಿಸಿ. ಈ ಪ್ಯಾರಾಗ್ರಾಫ್ ಸಮನಾದ ಮಾಸಿಕ ಕಂತುಗಳ (ಇಎಂಐ) ಆಧಾರಿತ 'ಪರ್ಸನಲ್ ಲೋನ್‌ಗಳು' ಮೇಲೆ ಮಾತ್ರ ಅನ್ವಯವಾಗುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ, ಇದರಲ್ಲಿ 'ಪರ್ಸನಲ್ ಲೋನ್‌ಗಳು' ವ್ಯಾಖ್ಯಾನವು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಜನವರಿ 04, 2018 ದಿನಾಂಕದ "ಎಕ್ಸ್‌ಬಿಆರ್‌ಎಲ್ ರಿಟರ್ನ್ಸ್ - ಬ್ಯಾಂಕಿಂಗ್ ಅಂಕಿಅಂಶಗಳ ಮೇಲೆ ಸಮನ್ವಯತೆ" ಆರ್‌ಬಿಐನ ಸರ್ಕ್ಯುಲರ್ ಪ್ರಕಾರವಾಗಿದೆ.

3. **ಲೋನ್ ಅವಧಿ:**

☐ ಫಿಕ್ಸೆಡ್ ದರದ ಲೋನ್‌ಗಳು: ___ ತಿಂಗಳು

☐ ಫ್ಲೋಟಿಂಗ್ ದರದ ಲೋನ್‌ಗಳು: ___ ತಿಂಗಳು

☐ ಡ್ಯುಯಲ್ ದರ: ಫಿಕ್ಸೆಡ್ ___ ತಿಂಗಳಿಗೆ, ಫ್ಲೋಟಿಂಗ್ ___ ತಿಂಗಳಿಗೆ

ಗಮನಿಸಿ: ಆಯ್ಕೆ ಮಾಡಿದ್ದರೆ, ಲೋನ್ ಕಾಲಾವಧಿಯು ಮುಂಚಿತ-ಇಎಂಐ ಕಾಲಾವಧಿಯನ್ನು ಒಳಗೊಂಡಿರುತ್ತದೆ. ಅನ್ವಯವಾಗುವ ಮುಂಚಿತ-ಇಎಂಐ ಅನ್ನು ಗ್ರಾಹಕರಿಗೆ ವಿಧಿಸಲಾಗುತ್ತದೆ.

4. **ಲೋನ್ ಉದ್ದೇಶ:**

| | |
|---|---|
| **ಹೋಮ್ ಲೋನ್‌ಗಳಿಗೆ ಅನ್ವಯವಾಗುವ ಲೋನಿನ ಉದ್ದೇಶ (ದಯವಿಟ್ಟು ಸೂಕ್ತ ಆಯ್ಕೆಯನ್ನು ಟಿಕ್ ಮಾಡಿ)** | ☐ ಹೊಸ ಆಸ್ತಿ ಖರೀದಿ/ ಬಿಲ್ಡರ್ ಖರೀದಿ<br>☐ ಸ್ವಯಂ ನಿರ್ಮಾಣ<br>☐ ಪ್ಲಾಟ್ ಖರೀದಿ ಮತ್ತು ಅದರಲ್ಲಿ ಮನೆ ನಿರ್ಮಾಣ<br>☐ ಮರುಮಾರಾಟ ಖರೀದಿ / ಹಳೆಯ ಯೂನಿಟ್‌ನ ಖರೀದಿ |
| **ನಾನ್-ಹೋಮ್ ಲೋನ್‌ಗಳಿಗೆ ಅನ್ವಯವಾಗುವ ಲೋನ್ ಉದ್ದೇಶ** | ☐ ಎಲ್ಲಾ ಸಾಲಗಾರರು ಸಂಬಳ ಪಡೆಯುವ ವ್ಯಕ್ತಿಗಳಾಗಿರುವ ಸಂದರ್ಭಗಳಿಗೆ - ವೈಯಕ್ತಿಕ ಬಳಕೆ<br>☐ ಒಬ್ಬ ಸಾಲಗಾರರೂ ಕೂಡ ಸಂಬಳ ಪಡೆಯದ ಅಥವಾ ವ್ಯಕ್ತಿಗಳಲ್ಲದ ಸಂದರ್ಭಗಳಿಗೆ - ಬಿಸಿನೆಸ್ ಉದ್ದೇಶ / ಬಳಕೆ* |

*ಬಿಸಿನೆಸ್ ಉದ್ದೇಶಕ್ಕಾಗಿ ಪಡೆದ ಲೋನ್‌ಗಳಾಗಿ ವರ್ಗೀಕರಿಸಲಾದ ಲೋನ್‌ಗಳ ವಿವರಣಾತ್ಮಕ ಪಟ್ಟಿ:

- ಗುತ್ತಿಗೆ ಬಾಡಿಗೆ ರಿಯಾಯಿತಿ ಲೋನ್‌ಗಳು.

- ವರ್ಕಿಂಗ್ ಕ್ಯಾಪಿಟಲ್, ಸಾಲ ಒಗ್ಗೂಡಿಸುವಿಕೆ, ಬಿಸಿನೆಸ್ ಲೋನ್ ಮರುಪಾವತಿ, ಬಿಸಿನೆಸ್ ವಿಸ್ತರಣೆ, ಬಿಸಿನೆಸ್ ಆಸ್ತಿಯ ಸ್ವಾಧೀನ ಅಥವಾ ಫಂಡ್‌ಗಳ ಅದೇ ರೀತಿಯ ಯಾವುದೇ ಅಂತಿಮ ಬಳಕೆಯಂತಹ ಬಿಸಿನೆಸ್ ಉದ್ದೇಶ/ ಬಳಕೆಗಾಗಿ ಪಡೆದ ಆಸ್ತಿ ಮೇಲಿನ ಲೋನ್‌ಗಳು.
- ವಸತಿಯೇತರ ಆಸ್ತಿಗಳನ್ನು ಖರೀದಿಸಲು ಲೋನ್.
- ವಸತಿಯೇತರ ಆಸ್ತಿಯ ಭದ್ರತೆಯ ಮೇಲೆ ಲೋನ್.
- ವರ್ಕಿಂಗ್ ಕ್ಯಾಪಿಟಲ್, ಸಾಲ ಒಗ್ಗೂಡಿಸುವಿಕೆ, ಬಿಸಿನೆಸ್ ಲೋನ್ ಮರುಪಾವತಿ, ಬಿಸಿನೆಸ್ ವಿಸ್ತರಣೆ, ಬಿಸಿನೆಸ್ ಆಸ್ತಿಯ ಸ್ವಾಧೀನ ಅಥವಾ ಫಂಡ್‌ಗಳ ಅದೇ ರೀತಿಯ ಯಾವುದೇ ಅಂತಿಮ ಬಳಕೆಯಂತಹ ಬಿಸಿನೆಸ್ ಉದ್ದೇಶ/ ಬಳಕೆಗಾಗಿ ಟಾಪ್ ಅಪ್ ಲೋನ್‌ಗಳು.

**5. ಕಂತಿನ ವಿಧಗಳು: ಮಾಸಿಕ**

- **ಟರ್ಮ್ ಲೋನ್.**
- **ಫ್ಲೆಕ್ಸಿ ಟರ್ಮ್ ಲೋನ್.**
- **ಫ್ಲೆಕ್ಸಿ ಹೈಬ್ರಿಡ್ ಲೋನ್.**

**ಲೋನ್ ಅಕೌಂಟ್‌ಗೆ ಗ್ರಾಹಕರು ಮಾಡಿದ ಪಾವತಿಗಳ ಹೊಂದಾಣಿಕೆ:**

I. ಟರ್ಮ್ ಲೋನ್‌ಗಳು (ಫ್ಲೆಕ್ಸಿ ಟರ್ಮ್ ಲೋನ್‌ಗಳು ಸೇರಿದಂತೆ):

a) ಪಾವತಿ ಗೇಟ್‌ವೇಗಳನ್ನು ಹೊರತುಪಡಿಸಿ (ಅಂದರೆ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ ಐಎಂಪಿಎಸ್/ಯುಪಿಐ ಇತ್ಯಾದಿ) ಬೇರೆ ಯಾವುದೇ ವಿಧಾನದ ಮೂಲಕ ಪಾವತಿ ಮಾಡುವ ಗ್ರಾಹಕರು: ಕಂಪನಿಯು ಕ್ಲಿಯರ್ ಫಂಡ್ ಪಡೆದ ನಂತರ (ವಿಳಂಬ ಟ್ರಾನ್ಸಾಕ್ಷನ್‌ಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಅದೇ ದಿನ) ಲೋನ್ ಅಕೌಂಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ

b) ಪಾವತಿ ಗೇಟ್‌ವೇ (ಉದಾ. bill desk) ಮೂಲಕ ಪಾವತಿ ಮಾಡುವ ಗ್ರಾಹಕರು: ಕಂಪನಿಯು ಹಣವನ್ನು ಪಡೆದ ನಂತರ (ಸಾಮಾನ್ಯವಾಗಿ T+1 ದಿನ, ಇಲ್ಲಿ 'T' ಗ್ರಾಹಕರ ಅಕೌಂಟ್‌ನ ಡೆಬಿಟ್ ದಿನಾಂಕವಾಗಿರುತ್ತದೆ) ಲೋನ್ ಅಕೌಂಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ.

c) ಕಂಪನಿಯು ಹಣವನ್ನು ಪಡೆಯದೇ ಇರುವುದರಿಂದ ಕ್ರೆಡಿಟ್ ಅವಧಿಯ ಲೆಕ್ಕಾಚಾರದಲ್ಲಿ ಬ್ಯಾಂಕಿಂಗ್ ರಜಾದಿನಗಳನ್ನು ಹೊರಗಿಡಲಾಗುತ್ತದೆ, ಆದ್ದರಿಂದ ಇದು T+1 ದಿನಗಳಿಗಿಂತ ಹೆಚ್ಚಾಗಿರಬಹುದು. ಒಂದಕ್ಕಿಂತ ಹೆಚ್ಚು ಬ್ಯಾಂಕಿಂಗ್ ರಜಾದಿನಗಳು ಇರಬಹುದಾದ್ದರಿಂದ ಹಾಗೂ ಅಂತಹ ಸಂದರ್ಭಗಳಲ್ಲಿ ಗ್ರಾಹಕರ ಬ್ಯಾಂಕ್ ಅಕೌಂಟ್ ಡೆಬಿಟ್ ಆಗುವ ದಿನ ಮತ್ತು ಕಂಪನಿಯ ಅಕೌಂಟ್ ಕ್ರೆಡಿಟ್ ಆಗುವ ದಿನದ ನಡುವೆ T+1 ದಿನಕ್ಕಿಂತ ಹೆಚ್ಚು ವ್ಯತ್ಯಾಸ ಆಗಬಹುದಾದ್ದರಿಂದ, ಪಾವತಿ ಗೇಟ್‌ವೇಗಳ ಮೂಲಕ ಹಣ ಟ್ರಾನ್ಸ್‌ಫರ್ ಮಾಡುವ ಮೊದಲು ಗ್ರಾಹಕರು ಬ್ಯಾಂಕಿಂಗ್ ರಜಾದಿನಗಳನ್ನು ಸರಿಯಾಗಿ ಪರಿಶೀಲಿಸಬೇಕೆಂದು ಸಲಹೆ ನೀಡಲಾಗುತ್ತದೆ.

d) ಗ್ರಾಹಕರ ಅಕೌಂಟ್‌ನಲ್ಲಿ ಡೆಬಿಟ್ ಆಗಿದ್ದು, ಆದರೆ ಪಾವತಿ ಗೇಟ್‌ವೇ ಸಮಸ್ಯೆಯಿಂದಾಗಿ ಕಂಪನಿಗೆ ಕ್ರೆಡಿಟ್ ವಿಳಂಬವಾಗುವ ಟ್ರಾನ್ಸಾಕ್ಷನ್‌ಗಳ ಸಂದರ್ಭದಲ್ಲಿ, ಕಂಪನಿ ಅಕೌಂಟ್‌ನಲ್ಲಿ ಕ್ರೆಡಿಟ್ ಆದ ದಿನದಂದು ಗ್ರಾಹಕರ ಅಕೌಂಟ್‌ಗೆ ಕ್ರೆಡಿಟ್ ನೀಡಲಾಗುತ್ತದೆ.

II. ಲೋನ್ ಮೊತ್ತವು ರೂ 1.00 ಕೋಟಿಗಿಂತ ಅಧಿಕವಾಗಿರುವ ಫ್ಲೆಕ್ಸಿ ಟರ್ಮ್ ಲೋನ್‌ಗೆ ಹೆಚ್ಚುವರಿ ಷರತ್ತುಗಳು:

a) ಸಾಮಾನ್ಯ ಬ್ಯಾಂಕಿಂಗ್ ಕೆಲಸದ ದಿನದಂದು ಫ್ಲೆಕ್ಸಿ ಪಾವತಿಗಳ ಕಟ್ ಆಫ್ ಸಮಯವು ಮಧ್ಯಾಹ್ನ 1 ಗಂಟೆ ಆಗಿರುತ್ತದೆ.

b) ಬ್ಯಾಂಕಿಂಗ್ ಕೆಲಸದ ದಿನದಂದು ಮಧ್ಯಾಹ್ನ 1 ಗಂಟೆಗೂ ಮೊದಲು ಟ್ರಾನ್ಸ್‌ಫರ್ ಮಾಡಲಾದ ಮೊತ್ತಗಳು: ಅದೇ ದಿನ ಲೋನ್ ಅಕೌಂಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ [ಪಾವತಿ ಗೇಟ್‌ವೇ ಮೂಲಕ ಪಾವತಿಗಳನ್ನು ಹೊರತುಪಡಿಸಿ, ಷರತ್ತು: I(b)].

c) ಬ್ಯಾಂಕಿಂಗ್ ಕೆಲಸದ ದಿನದಂದು ಮಧ್ಯಾಹ್ನ 1 ಗಂಟೆಯ ನಂತರ ಟ್ರಾನ್ಸ್‌ಫರ್ ಮಾಡಲಾದ ಮೊತ್ತಗಳು: T+1 ದಿನದಂದು ಲೋನ್ ಅಕೌಂಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ.

d) ಬ್ಯಾಂಕಿಂಗ್ ರಜಾ ದಿನಗಳಂದು ಮಾಡಲಾದ ಪಾವತಿಗಳು: ಮುಂದಿನ ಕೆಲಸದ ದಿನದಂದು ಲೋನ್ ಅಕೌಂಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಒಂದಕ್ಕಿಂತ ಹೆಚ್ಚು ಬ್ಯಾಂಕಿಂಗ್ ರಜಾದಿನಗಳು ಇರಬಹುದಾದ್ದರಿಂದ ಹಾಗೂ ಅಂತಹ ಸಂದರ್ಭಗಳಲ್ಲಿ ಗ್ರಾಹಕರ ಬ್ಯಾಂಕ್ ಅಕೌಂಟ್ ಡೆಬಿಟ್ ಆಗುವ ದಿನ ಮತ್ತು ಕಂಪನಿಯ ಅಕೌಂಟ್ ಕ್ರೆಡಿಟ್ ಆಗುವ ದಿನದ ನಡುವೆ T+1 ದಿನಕ್ಕಿಂತ ಹೆಚ್ಚು ವ್ಯತ್ಯಾಸ ಆಗಬಹುದಾದ್ದರಿಂದ ಪಾವತಿ ಗೇಟ್‌ವೇಗಳ ಮೂಲಕ ಹಣ ಟ್ರಾನ್ಸ್‌ಫರ್ ಮಾಡುವ ಮೊದಲು ಗ್ರಾಹಕರು ಬ್ಯಾಂಕಿಂಗ್ ರಜಾದಿನಗಳನ್ನು ಸರಿಯಾಗಿ ಪರಿಶೀಲಿಸಬೇಕೆಂದು ಸಲಹೆ ನೀಡಲಾಗುತ್ತದೆ.

e) ಗ್ರಾಹಕರ ಅಕೌಂಟ್‌ನಲ್ಲಿ ಡೆಬಿಟ್ ಆಗಿದ್ದು, ಆದರೆ ಪಾವತಿ ಗೇಟ್‌ವೇ ಸಮಸ್ಯೆಯಿಂದಾಗಿ ಕಂಪನಿಗೆ ಕ್ರೆಡಿಟ್ ವಿಳಂಬವಾಗುವ ಟ್ರಾನ್ಸಾಕ್ಷನ್‌ಗಳ ಸಂದರ್ಭದಲ್ಲಿ, ಕಂಪನಿ ಅಕೌಂಟ್‌ನಲ್ಲಿ ಕ್ರೆಡಿಟ್ ಆದ ದಿನದಂದು ಗ್ರಾಹಕರ ಅಕೌಂಟ್‌ಗೆ ಕ್ರೆಡಿಟ್ ನೀಡಲಾಗುತ್ತದೆ.

**6. ಭದ್ರತೆ**

- ಬಿಎಚ್‌ಎಫ್‌ಎಲ್ ಗೆ ಭದ್ರತೆ ರೂಪದಲ್ಲಿ ನೀಡಲಾದ ಅಥವಾ ಅಡಮಾನ/ಭದ್ರತೆ ರೂಪದಲ್ಲಿ ಬಿಎಚ್‌ಎಫ್‌ಎಲ್ ಗೆ ಕೊಡಬೇಕೆಂದು ನಿರ್ಧರಿಸಿರುವ ಆಸ್ತಿ/ಗಳ ಮೇಲೆ ರಚಿಸಲಾದ/ರಚಿಸಲಿರುವ ಶುಲ್ಕವನ್ನು/ಶುಲ್ಕಗಳನ್ನು ಲೋನಿನ ಭದ್ರತೆ ಎಂದು ಪರಿಗಣಿಸಲಾಗುತ್ತದೆ. ಇದನ್ನು ಲೋನ್ ಡಾಕ್ಯುಮೆಂಟ್‌ಗಳಲ್ಲಿ ವಿವರಿಸಲಾಗಿದೆ. ಬಿಎಚ್‌ಎಫ್‌ಎಲ್ ಗೆ ಲೋನ್ ಕೊಡಲು ಸೂಕ್ತ ಎನಿಸುವ ಮತ್ತು ಅದಕ್ಕೆ ಅನುಗುಣವಾಗಿ ಸಾಲಗಾರ ಸಲ್ಲಿಸುವ ಯಾವುದೇ ಅಡಮಾನ, ಖಾತರಿ ಅಥವಾ ಬೇರೆ ಯಾವುದೇ ರೀತಿಯ ಭದ್ರತೆಯನ್ನು ಭದ್ರತೆ ಎಂದು ಪರಿಗಣಿಸಲಾಗುತ್ತದೆ. ಸಾಲಗಾರರು ಬಿಎಚ್‌ಎಫ್‌ಎಲ್ ಗೆ ಅಗತ್ಯವಿರುವ ಟೈಟಲ್ ಡೀಡ್, ಡಾಕ್ಯುಮೆಂಟ್‌ಗಳು ಮತ್ತು ವರದಿಗಳ ಮೂಲ ಪ್ರತಿ/ನಕಲಿ ಪ್ರತಿಯನ್ನು ಸಲ್ಲಿಸಬೇಕು.
- ಹೇಳಲಾದ ಭದ್ರತೆಯ ರಚನೆಗೆ ಬೇಕಾದ ಎಲ್ಲಾ ಶುಲ್ಕಗಳನ್ನು ಸಾಲಗಾರರು ಭರಿಸಬೇಕು ಮತ್ತು ಅದರ ಪರಿಪೂರ್ಣತೆಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಅನುಸರಿಸಬೇಕು.

ಗಮನಿಸಿ: ಅದು ಸುರಕ್ಷಿತವಲ್ಲದ ಲೋನ್ ಆಗಿದ್ದರೆ, ಭದ್ರತೆಗೆ ಸಂಬಂಧಿಸಿದ ಮೇಲ್ಕಂಡ ಷರತ್ತುಗಳು w.r.t. ಅನ್ವಯವಾಗುವುದಿಲ್ಲ.

**7. ಆಸ್ತಿ / ಸಾಲಗಾರರ ಇನ್ಶೂರೆನ್ಸ್ ಮತ್ತು ಮೌಲ್ಯವರ್ಧಿತ ಪ್ರಾಡಕ್ಟ್‌ಗಳು**

- ಆಸ್ತಿಯನ್ನು ಭದ್ರತೆ ರೂಪದಲ್ಲಿ ನೀಡುವ ಸಂದರ್ಭದಲ್ಲಿ, ಆಸ್ತಿಗೆ ತೊಂದರೆ ಆಗುವುದನ್ನು ತಪ್ಪಿಸಲು ಸಾಲಗಾರನು ಆ ಆಸ್ತಿಯ ಮೇಲೆ ಲೋನ್ ಮೊತ್ತಕ್ಕೆ ಸಮನಾದ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಇನ್ಶೂರೆನ್ಸ್ ಮಾಡಿಸಿರಬೇಕು ಹಾಗೂ ಲೋನ್ ಅವಧಿಯಲ್ಲಿ ಅದನ್ನು ಅನುಭವಿಸುವ ಹಕ್ಕು ಸಂಪೂರ್ಣವಾಗಿ ಬಿಎಚ್‌ಎಫ್‌ಎಲ್ ನದ್ದೇ ಆಗಿರಬೇಕು. BHFL ಗೆ ಅಗತ್ಯ ಬಿದ್ದಾಗ, ಅದಕ್ಕೆ ಸಂಬಂಧಿಸಿದ ಆಧಾರಗಳನ್ನು ಬಿಎಚ್‌ಎಫ್‌ಎಲ್ ಗೆ ನೀಡಬೇಕು.
- ಇನ್ಶೂರೆನ್ಸ್ ಕಂಪನಿಯಿಂದ ನೀಡಲಾದ ಇನ್ಶೂರೆನ್ಸ್ ಪಾಲಿಸಿಯ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ, ಕ್ಲೈಮ್‌ಗಳು ಮತ್ತು ಕವರೇಜ್ ಅನ್ನು ನಿರ್ವಹಿಸಲಾಗುತ್ತದೆ.

- ಮಾಸ್ಟರ್ ಪಾಲಿಸಿದಾರರ ಸಾಮರ್ಥ್ಯಕ್ಕೆ ತಕ್ಕಂತೆ, ತನ್ನ ಬೇರೆಬೇರೆ ಇನ್ಶೂರೆನ್ಸ್ ಗ್ರೂಪ್ ಪಾಲಿಸಿಗಳ ಅಡಿಯಲ್ಲಿ ಬಿಎಚ್ಎಫ್ಎಲ್ ತನ್ನ ಗ್ರಾಹಕರಿಗೆ ಮಾತ್ರ ನೋಂದಣಿ ಒದಗಿಸುತ್ತದೆ. ಬಿಎಚ್ಎಫ್ಎಲ್ ನ ಪಾತ್ರವು ಗ್ರಾಹಕರ ಕೋರಿಕೆ ಮೇರೆಗೆ ಇನ್ಶೂರೆನ್ಸ್ ಕಂಪನಿಯಿಂದ ಇನ್ಶೂರೆನ್ಸ್ ಪಾಲಿಸಿಗೆ ಅಪ್ಲೈ ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ. ಆದಾಗ್ಯೂ, ಇನ್ಶೂರೆನ್ಸ್ ಪಾಲಿಸಿಯನ್ನು ನೀಡುವ , ಅಗತ್ಯವಾದ ಇನ್ಶೂರೆನ್ಸ್ ಕವರ್ ಒದಗಿಸುವ ಮತ್ತು ಪಾಲಿಸಿ ಅಡಿಯಲ್ಲಿ ಮುಂದಿನ ದಿನಗಳಲ್ಲಿ ಯಾವುದೇ ಕ್ಲೈಮ್ ಅನ್ನು ಸೆಟಲ್ ಮಾಡುವ ನಿರ್ಧಾರ ಸಂಪೂರ್ಣವಾಗಿ ಇನ್ಶೂರೆನ್ಸ್ ಕಂಪನಿಯದ್ದೇ ಆಗಿರುತ್ತದೆ. ಇನ್ಶೂರೆನ್ಸ್ ಒಂದು ಕೋರಿಕೆಯ ವಿಷಯವಾಗಿದೆ ಹಾಗೂ ಸಾಲಗಾರರು ಅದನ್ನು ಪಡೆದುಕೊಳ್ಳಲು ಸ್ವಯಂಪ್ರೇರಿತವಾಗಿ ನಿರ್ಧರಿಸಿರುತ್ತಾರೆ. ಇನ್ಶೂರೆನ್ಸ್ ಪ್ರಾಡಕ್ಟ್, ಅದಕ್ಕೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳು ಮತ್ತು/ಅಥವಾ ಆ ಇನ್ಶೂರೆನ್ಸ್ ಪ್ರಾಡಕ್ಟ್‌ನ ಪ್ರಯೋಜನಗಳು ಹಾಗೂ ಇನ್ಶೂರೆನ್ಸ್ ಕಂಪನಿ ಆ ಕ್ಲೈಮ್‌ಗಳನ್ನು ಪ್ರಕ್ರಿಯೆಗೊಳಿಸುವ ವಿಧಾನದ ಮೇಲೆ ಬಿಎಚ್ಎಫ್ಎಲ್ ಯಾವುದೇ ವಾರಂಟಿಯನ್ನು ಹೊಂದಿಲ್ಲ ಮತ್ತು ಯಾವುದೇ ಪ್ರಾತಿನಿಧ್ಯ ವಹಿಸುವುದಿಲ್ಲ. ಇದಲ್ಲದೆ, ಇನ್ಶೂರೆನ್ಸ್ ಪಾಲಿಸಿ ಹಾಗೂ/ಅಥವಾ ಕ್ಲೈಮ್ ಮನವಿಯ ಅಂಗೀಕಾರ ಅಥವಾ ತಿರಸ್ಕಾರ, ಕ್ಲೈಮ್‌ಗಳನ್ನು ಪ್ರಕ್ರಿಯೆಗೊಳಿಸುವ ವಿಧಾನ, ಇತ್ಯಾದಿಗಳಿಗೆ ಬಿಎಚ್ಎಫ್ಎಲ್ ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗಿರುವುದಿಲ್ಲ. ಇನ್ಶೂರೆನ್ಸ್ ಪಾಲಿಸಿಗೆ ಸಂಬಂಧಿಸಿದ ಎಲ್ಲಾ ಅಥವಾ ಯಾವುದೇ ದೂರು ದುಮ್ಮಾನಗಳನ್ನು ಇನ್ಶೂರೆನ್ಸ್ ಕಂಪನಿಯೊಂದಿಗೆ ನೇರವಾಗಿ ಬಗೆಹರಿಸಿಕೊಳ್ಳಬೇಕು.
- ಮೌಲ್ಯವರ್ಧಿತ ಪ್ರಾಡಕ್ಟ್‌ಗಳು ಬೇಡಿಕೆ ಇಡುವ ವಿಷಯವಾಗಿದೆ ಮತ್ತು ಸಾಲಗಾರನು ಸ್ವಯಂಪ್ರೇರಣೆಯಿಂದ ಅದನ್ನು ಪಡೆದುಕೊಳ್ಳಲು ಪರಿಗಣಿಸುತ್ತಾನೆ. ಬಿಎಚ್ಎಫ್ಎಲ್‌ನ ಪಾತ್ರವು ಇದಕ್ಕೆ ಸೀಮಿತವಾಗಿದೆ,ಇದು ಸೇವಾ ಪೂರೈಕೆದಾರರಿಂದ ಅಂತಹ ಮೌಲ್ಯವರ್ಧಿತ ಪ್ರಾಡಕ್ಟ್‌ಗಳಿಗೆ ಅಪ್ಲಿಕೇಶನ್ ಸಲ್ಲಿಸಲು ಗ್ರಾಹಕರ ಕೋರಿಕೆಯ ಮೇರೆಗೆ ಮಾತ್ರ ಅವಕಾಶ ನೀಡುತ್ತದೆ. ಬಿಎಚ್ಎಫ್ಎಲ್ ಯಾವುದೇ ಖಾತರಿಯನ್ನು ನೀಡುವುದಿಲ್ಲ ಮತ್ತು ಒದಗಿಸಿದ ಪ್ರಾಡಕ್ಟ್‌ಗಳು, ಆಧಾರವಾಗಿರುವ ನಿಯಮಗಳು ಮತ್ತು ಷರತ್ತುಗಳು ಮತ್ತು/ಅಥವಾ ಪ್ರಾಡಕ್ಟ್‌ಗಳ ಪ್ರಯೋಜನಗಳು, ಥರ್ಡ್ ಪಾರ್ಟಿಯಿಂದ ಹಕ್ಕುಗಳು / ಸೇವೆಗಳನ್ನು ಪ್ರಕ್ರಿಯೆಗೊಳಿಸುವ ವಿಧಾನದ ಬಗ್ಗೆ ಯಾವುದೇ ಪ್ರಾತಿನಿಧ್ಯವನ್ನು ನೀಡುವುದಿಲ್ಲ. ನೀಡಲಾದ ಮತ್ತು /ಅಥವಾ ಕ್ಲೈಮ್‌ಗಳು, ಕ್ಲೈಮ್‌ಗಳು / ಸೇವೆಗಳ ಪ್ರಕ್ರಿಯೆಯ ವಿಧಾನ ಇತ್ಯಾದಿಗಳನ್ನು ಯಾವುದೇ ರೀತಿಯಲ್ಲಿ ಸ್ವೀಕರಿಸಲು ಅಥವಾ ತಿರಸ್ಕರಿಸಲು ಬಿಎಚ್ಎಫ್ಎಲ್ ಜವಾಬ್ದಾರಿ ಹೊಂದಿರುವುದಿಲ್ಲ. ಲಭ್ಯವಿರುವ ಪ್ರಾಡಕ್ಟ್‌ಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಥವಾ ಯಾವುದೇ ಕುಂದುಕೊರತೆಗಳನ್ನು ನೇರವಾಗಿ ಸೇವಾ ಪೂರೈಕೆದಾರರೊಂದಿಗೆ ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ

**8. ಲೋನ್ ವಿತರಣೆಗೆ ಷರತ್ತುಗಳು**

- ಮಂಜೂರಾತಿ ಪತ್ರ, ಲೋನ್ ಒಪ್ಪಂದ ಮತ್ತು ಇತರ ಲೋನ್ ಡಾಕ್ಯುಮೆಂಟ್‌ಗಳಲ್ಲಿ ಬಿಎಚ್ಎಫ್ಎಲ್ ಸೂಚಿಸಿರುವ ಎಲ್ಲಾ ಸಂಬಂಧಿತ ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವುದು;
- ***ಅದೊಂದು ಸುರಕ್ಷಿತ ಲೋನ್ ಆಗಿದ್ದರೆ,*** ಗ್ರಾಹಕರು ಈ ಎಲ್ಲಾ ಹೆಚ್ಚುವರಿ ಷರತ್ತುಗಳನ್ನು ಕೂಡ ಪೂರೈಸಬೇಕು:
  - ಆಸ್ತಿಯ ಶಾಸನಬದ್ಧ ಮತ್ತು ತಾಂತ್ರಿಕ ಮೌಲ್ಯಮಾಪನ;
  - ಭದ್ರತೆ ರೂಪದಲ್ಲಿ ನೀಡಲಾಗುವ ಆಸ್ತಿಯ ಸ್ಪಷ್ಟ, ಮಾರುಕಟ್ಟೆ ಯೋಗ್ಯ ಮತ್ತು ಋಣಾತೀತ ಟೈಟಲ್;
  - ಒಂದು ವೇಳೆ ಅದು ಹೋಮ್ ಲೋನ್ ಆಗಿದ್ದಲ್ಲಿ, ಸಾಲಗಾರರು ಸ್ವತ್ತಿನ ಖರೀದಿಗೆ ತಮ್ಮ ಸ್ವಂತ ಕೊಡುಗೆ ನೀಡಿರುವ ಕುರಿತು ಬಿಎಚ್ಎಫ್ಎಲ್ ಗೆ ಪುರಾವೆ ಸಲ್ಲಿಸಬೇಕು;
  - ಆಸ್ತಿಯಲ್ಲಿ/ಗಳಲ್ಲಿ ನಡೆಸಿದ ನಿರ್ಮಾಣ ಕಾಮಗಾರಿಗಳನ್ನು, ಅನುಮೋದಿತ ಪ್ಲಾನ್‌ಗಳು ಹಾಗೂ ಅನ್ವಯವಾಗುವ ಕಾನೂನು/ ಬೈಲಾಗಳು/ ನಿಯಮ ಮತ್ತು ಷರತ್ತುಗಳ ಪ್ರಕಾರವೇ ಕೈಗೊಳ್ಳಲಾಗಿದೆ;

- ಆಸ್ತಿಗೆ ಸಂಬಂಧಿಸಿದ ಎಲ್ಲಾ ಅಗತ್ಯ ಅನುಮೋದನೆಗಳನ್ನು (ಅನುಮೋದಿತ ಪ್ಲಾನ್‌ಗಳು ಮತ್ತು ಶಾಸನಬದ್ಧ ಅನುಮೋದನೆಗಳು ಸೇರಿದಂತೆ, ಆದರೆ ಅಷ್ಟಕ್ಕೇ ಸೀಮಿತವಾಗದೆ) ಪಡೆದುಕೊಳ್ಳಲಾಗಿದೆ ಹಾಗೂ ಬಿಎಚ್‌ಎಫ್‌ಎಲ್ ಗೆ ಸಲ್ಲಿಸಲಾಗಿದೆ..

**9. ಲೋನ್ ಮರುಪಾವತಿ**

- ಲೋನ್ ಒಪ್ಪಂದದಲ್ಲಿ ಅಥವಾ ಟಾಪ್-ಅಪ್ ಲೋನ್ ಅನುಬಂಧದಲ್ಲಿ ನಿಗದಿಪಡಿಸಿರುವ ಯಾವುದೇ ಮರುಪಾವತಿ ವಿಧಾನದ ಮೂಲಕ ಅಥವಾ ಸಾಲಗಾರ ಮತ್ತು ಬಿಎಚ್‌ಎಫ್‌ಎಲ್ ಇಬ್ಬರೂ ಒಪ್ಪಿರುವ ಸ್ಥಳ ಮತ್ತು ವಿಧಾನದಲ್ಲಿ, ಗಡುವಿನ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ EMI ಗಳು/ಮಾಸಿಕ ಕಂತುಗಳು ಮತ್ತು ಇತರ ಬಾಕಿಗಳನ್ನು ಮರುಪಾವತಿಸಲು ಬಿಎಚ್‌ಎಫ್‌ಎಲ್ ಗೆ ಸಾಲಗಾರರು ಒಪ್ಪುತ್ತಾರೆ.
- ಬಿಎಚ್‌ಎಫ್‌ಎಲ್, ಸಾಲಗಾರರ ಬರಹ ರೂಪದ ವಿನಂತಿ ಮೇರೆಗೆ ಮರುಪಾವತಿ ವಿಧಾನವನ್ನು ಬದಲಾಯಿಸಲು ಒಪ್ಪಿಕೊಳ್ಳಬಹುದು. ಬಿಎಚ್‌ಎಫ್‌ಎಲ್, ಯಾವುದೇ ಸಮಯದಲ್ಲಿ, ತಮ್ಮ ಸ್ವಂತ ಮತ್ತು ಸಂಪೂರ್ಣ ವಿವೇಚನೆಯ ಮೇರೆಗೆ ಮರುಪಾವತಿ ವೇಳಾಪಟ್ಟಿಯನ್ನು ಪರಿಷ್ಕರಿಸಬಹುದು ಮತ್ತು ಅದನ್ನು ಸಾಲಗಾರರಿಗೆ ಮುಂಚಿತವಾಗಿ ಸೂಚಿಸಬಹುದು.
- ಲೋನ್ ಮೊತ್ತ ಹಾಗೂ ಬಡ್ಡಿದರದ ಆಧಾರದ ಮೇಲೆ ಲೆಕ್ಕಹಾಕಿದ ಬಡ್ಡಿಯನ್ನು ಮರುಪಾವತಿ ಅವಧಿಯೊಳಗೆ ಪಾವತಿಸಲು ಅನುಕೂಲವಾಗುವಂತೆ ಇಎಂಐ/ ಮಾಸಿಕ ಕಂತುಗಳನ್ನು ನಿರ್ಧರಿಸಬೇಕು. ಬಿಎಚ್‌ಎಫ್‌ಎಲ್ ಗೆ ಬಾಕಿ ಮೊತ್ತವನ್ನು ಪೂರ್ಣವಾಗಿ ಮರುಪಾವತಿ ಮಾಡುವವರೆಗೆ ಇಎಂಐ/ಮಾಸಿಕ ಕಂತುಗಳ ಪಾವತಿಯನ್ನು ಮುಂದುವರಿಸಲು ಸಾಲಗಾರರು ಒಪ್ಪುತ್ತಾರೆ.

**10. ಹೆಚ್ಚುವರಿ ಬಾಕಿಗಳನ್ನು ಹಿಂಪಡೆಯಲು ಅನುಸರಿಸಬೇಕಾದ ಸಂಕ್ಷಿಪ್ತ ವಿಧಾನ**

ಲೋನ್ ಒಪ್ಪಂದ ಮತ್ತು ಇತರ ಲೋನ್ ಡಾಕ್ಯುಮೆಂಟ್‌ಗಳಲ್ಲಿ ಉಲ್ಲೇಖಿಸಿದಂತೆ ಯಾವುದೇ ಡೀಫಾಲ್ಟ್ ("ಡೀಫಾಲ್ಟ್ ಸಂದರ್ಭ") ಸಂಭವಿಸಿದಾಗ, ಬಿಎಚ್‌ಎಫ್‌ಎಲ್ ಗೆ ನೀಡಬೇಕಾದ ಎಲ್ಲಾ ಬಾಕಿ ಮೊತ್ತಗಳನ್ನು ಆ ಕೂಡಲೇ ಪಾವತಿಸಬೇಕಾಗುತ್ತದೆ ಮತ್ತು ಅಂತಹ ಸಂದರ್ಭದಲ್ಲಿ ಲೋನ್ ಒಪ್ಪಂದ ಮತ್ತಿತರ ಲೋನ್ ಡಾಕ್ಯುಮೆಂಟ್‌ಗಳ ಅಡಿಯಲ್ಲಿ ತನಗಿರುವ ಹಕ್ಕುಗಳನ್ನು ಚಲಾಯಿಸುವ ಮೂಲಕ ವಿಳಂಬ ಪಾವತಿಗೆ ಡೀಫಾಲ್ಟ್ ಬಡ್ಡಿ ವಿಧಿಸುವುದು, ಬಾಕಿ ವಸೂಲಿ ಮಾಡುವುದನ್ನು ಒಳಗೊಂಡಂತೆ ಆದರೆ ಅದಕ್ಕೆ ಮಾತ್ರ ಸೀಮಿತವಾಗಿರದೆ ಇನ್ನಿತರ ಕ್ರಮಗಳನ್ನು ಕೈಗೊಳ್ಳುವ ಸಂಪೂರ್ಣ ಹಕ್ಕು ಬಿಎಚ್‌ಎಫ್‌ಎಲ್ ಗೆ ಇರುತ್ತದೆ. ಜೊತೆಗೆ, ಅದೇನಾದರೂ ಸುರಕ್ಷಿತ ಲೋನ್ ಆಗಿದ್ದಲ್ಲಿ, ಕಾನೂನಿನ ಅಡಿಯಲ್ಲಿ ಲಭ್ಯವಿರುವ ಪರಿಹಾರಗಳಿಗೆ ಅನುಗುಣವಾಗಿ ಸೆಕ್ಯೂರಿಟಿಯ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ಬಿಎಚ್‌ಎಫ್‌ಎಲ್ ಗೆ ಇರುತ್ತದೆ. ಬಿಎಚ್‌ಎಫ್‌ಎಲ್ ಗೆ ಇರುವ ಇತರೆ ಹಕ್ಕುಗಳೆಂದರೆ:

- ಲೋನ್ ಸೇರಿದಂತೆ ಉಳಿದಿರುವ ಬಾಕಿಗಳ ಮರುಪಾವತಿಯನ್ನು ಚುರುಕುಗೊಳಿಸುವುದು.
- ಲೋನಿನ ಪಾವತಿಗಾಗಿ ಬೇಡಿಕೆ ಇಡುವುದು, ಅಥವಾ ಲೋನಿಗೆ ಸಂಬಂಧಿಸಿದಂತೆ ಸಾಲಗಾರರು ಪಾವತಿಸಬೇಕಾದ ಅಷ್ಟೂ ಮೊತ್ತವನ್ನು ತಕ್ಷಣವೇ ಪಾವತಿಸಬೇಕಾದ ಬಾಕಿ ಎಂದು ಘೋಷಿಸುವುದು.
- ತಡವಾದ ಪಾವತಿ, ಬೌನ್ಸ್ ಶುಲ್ಕಗಳು, ತಡವಾದ ಪಾವತಿ ಶುಲ್ಕಗಳು ಮತ್ತು ಒಪ್ಪಂದದ ಪರಿಪೂರ್ಣತೆ ಶುಲ್ಕಗಳನ್ನು ಒಳಗೊಂಡಂತೆ ಅನ್ವಯವಾಗುವ ದಂಡ ಶುಲ್ಕಗಳ ಮೇಲೆ ಬಡ್ಡಿಯನ್ನು ವಿಧಿಸಲಾಗುತ್ತದೆ.ಲೋನ್ ಬಾಕಿ ಸಂದರ್ಭದಲ್ಲಿ,

ಅನ್ವಯವಾಗುವ ಕಾನೂನಿನಲ್ಲಿ ಕಂಪನಿಗೆ ಲಭ್ಯವಿರುವ ಇತರ ಎಲ್ಲಾ ಹಕ್ಕುಗಳು ಮತ್ತು ಪರಿಹಾರ ಮಾರ್ಗಗಳನ್ನು ಬಳಸಬಹುದು.

- ಕಂಪನಿಗೆ ಸೂಕ್ತ ಎನಿಸುವ ಇತರ ಷರತ್ತು/ಗಳನ್ನು ನಿಗದಿಪಡಿಸುವುದು ಅಥವಾ ಇತರ ಕ್ರಮಗಳನ್ನು ಜರುಗಿಸುವುದು;
- ಅನ್ವಯವಾಗುವ ಬಡ್ಡಿ ದರವನ್ನು ಪರಿಷ್ಕರಿಸುವುದು; ಮತ್ತು/ಅಥವಾ
- ಆರ್‌ಬಿಐ, ಎನ್‌ಎಚ್‌ಬಿ, ಸ್ಟಾಕ್ ಎಕ್ಸ್‌ಚೇಂಜ್, ಮಾಹಿತಿ ಘಟಕ, ಆಡಿಟರ್‌ಗಳು, ಸಿಬಿಲ್ ಮತ್ತು ಬೇರೆ ಯಾವುದೇ ಶಾಸನಬದ್ಧ/ನಿಯಂತ್ರಕ ಪ್ರಾಧಿಕಾರ ಮತ್ತು/ಅಥವಾ ಈ ನಿಟ್ಟಿನಲ್ಲಿ ಕಾನೂನಾತ್ಮಕ/ನಿಯಂತ್ರಕ ಅಧಿಕಾರ ಹೊಂದಿರುವ ಯಾವುದೇ ಇತರ ಏಜೆನ್ಸಿಗೆ ಸಾಲಗಾರರ ಎಲ್ಲಾ ಲೋನ್ ಅಕೌಂಟ್ ವಿವರಗಳನ್ನು ಬಹಿರಂಗಪಡಿಸುವ ಹಕ್ಕನ್ನು ಹೊಂದಿದೆ.
- ತನ್ನ ಸ್ವಂತ ವಿವೇಚನೆಯ ಮೇರೆಗೆ, ಸಾಲಗಾರರ ಹೆಸರು, ವಿಳಾಸ, ಫೋಟೋ, ಭದ್ರತಾ ವಿವರಗಳು (ಅನ್ವಯವಾದರೆ) ಸೇರಿದಂತೆ ಬಿಎಚ್‌ಎಫ್‌ಎಲ್ಗೆ ಸೂಕ್ತ ಎನಿಸುವ ಮಾಹಿತಿಯನ್ನು ಎಲೆಕ್ಟ್ರಾನಿಕ್, ಪ್ರಿಂಟ್ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸಬಹುದು ಮತ್ತು ಅದರಲ್ಲಿ ಲೋನ್ ಡೀಫಾಲ್ಟ್ ಕುರಿತ ಮಾಹಿತಿಯನ್ನು ಕೂಡ ಸೇರಿಸಬಹುದು; ಅಂತಹ ಮಾಹಿತಿಯ ಪ್ರಕಟಣೆಯಿಂದ ತನಗಾಗುವ ಯಾವುದೇ ಆರ್ಥಿಕ ಅಥವಾ ಇನ್ನಿತರ ಹಾನಿ ಮತ್ತು/ಅಥವಾ ನಷ್ಟಕ್ಕೆ BHFL ಜವಾಬ್ದಾರರಲ್ಲ ಎಂದು ಸಾಲಗಾರರು ಒಪ್ಪಿಕೊಳ್ಳುತ್ತಾರೆ.
- ಯಾವುದಾದರೂ ಸ್ವತ್ತನ್ನು ಸೆಕ್ಯೂರಿಟಿ ರೂಪದಲ್ಲಿ ಇಟ್ಟಿದ್ದರೆ, ಅದನ್ನು ತಾನಾಗಿಯೇ ಅಥವಾ ತನ್ನ ರಿಕವರಿ ಏಜೆಂಟ್‌ಗಳ ಮೂಲಕ ಅಥವಾ ಸಾಲದಾತರು ನೇಮಿಸಿರಬಹುದಾದ ಅಟಾರ್ನಿಗಳ ಮೂಲಕ ಸ್ವಾದೀನ ಪಡಿಸಿಕೊಳ್ಳುವುದು.

**11. ವಾರ್ಷಿಕ ಬಾಕಿ ಮೊತ್ತದ ಸ್ಟೇಟ್ಮೆಂಟ್**

ಸಾಲಗಾರರ ವಿನಂತಿಯ ಮೇರೆಗೆ, ಬಿಎಚ್‌ಎಫ್‌ಎಲ್ ವಾರ್ಷಿಕ ಬಾಕಿ ಸ್ಟೇಟ್ಮೆಂಟನ್ನು ನೀಡುತ್ತದೆ.

**12. ನ್ಯಾಯೋಚಿತ ಅಭ್ಯಾಸದ ಸಂಹಿತೆ**

ಕಂಪನಿಯ ನ್ಯಾಯಸಮ್ಮತ ಅಭ್ಯಾಸಗಳ ಸಂಹಿತೆಗಾಗಿ ಆನ್ಲೈನ್‌ನಲ್ಲಿ ಈ ಲಿಂಕ್ ನೋಡಿ: https://www.bajajhousingfinance.in/notice-board

**13. ಗ್ರಾಹಕ ಸೇವೆಗಳು**

| | |
|---|---|
| ಇಮೇಲ್ | bhflwecare@bajajfinserv.in |
| ಕರೆ ಮಾಡಿ | 022 - 45297300 |
| ಆನ್ಲೈನ್ ಗ್ರಾಹಕ ಪೋರ್ಟಲ್ | https://myaccount.bajajhousingfinance.in/#/home |
| ಶಾಖೆಗೆ ಭೇಟಿ ನೀಡುವ ಸಮಯ | 10:00 am ಇಂದ 6:00 pm |

ಮೇಲ್ಕಂಡ ಯಾವುದೇ ಮಾಧ್ಯಮಗಳ ಮೂಲಕ ಕೇಳಲಾದ ಪ್ರಶ್ನೆಗಳನ್ನು ಪರಿಶೀಲಿಸಿ, ಅವುಗಳನ್ನು 7 ಕೆಲಸದ ದಿನಗಳ ಒಳಗೆ ಪರಿಹರಿಸಲಾಗುತ್ತದೆ.

**(i) ಲೋನ್ ಅಕೌಂಟ್ ಸ್ಟೇಟ್ಮೆಂಟ್** - ಸೇವಾ ಮಾರ್ಗದರ್ಶಿಯಲ್ಲಿ ಸೂಚಿಸಿದಂತೆ ಲೋನ್ ಅಕೌಂಟ್ ಸ್ಟೇಟ್ಮೆಂಟನ್ನು ಆನ್‌ಲೈನಿನಲ್ಲಿ ಡೌನ್ಲೋಡ್ ಮಾಡಬಹುದು. ಬದಲಾಗಿ, ಗ್ರಾಹಕರು ಶಾಖೆಗೆ ಹೋಗುವ ಮೂಲಕ ಅಥವಾ ಮೇಲೆ ಸೂಚಿಸಿದ ಗ್ರಾಹಕ ಸಹಾಯವಾಣಿ ಸಂಖ್ಯೆಗೆ ಕರೆ ಮಾಡುವ ಮೂಲಕ ಸ್ಟೇಟ್‌ಮೆಂಟನ್ನು ಪಡೆಯಬಹುದು.

**(ii) ಟೈಟಲ್ ಡಾಕ್ಯುಮೆಂಟ್‌ಗಳ ಫೋಟೋಕಾಪಿ** - ಒಂದು ವೇಳೆ ಗ್ರಾಹಕರು ಆಸ್ತಿಯ ಟೈಟಲ್ ಹಾಗೂ ಲಿಂಕ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವ ಮೂಲಕ ಸುರಕ್ಷಿತ ಲೋನನ್ನು ಪಡೆದರೆ, ಆಸ್ತಿಯ ಟೈಟಲ್ ಮತ್ತು ಲಿಂಕ್ ಡಾಕ್ಯುಮೆಂಟ್‌ಗಳ ಫೋಟೋಕಾಪಿಯನ್ನು ಗ್ರಾಹಕರಿಂದ ಲಿಖಿತ ಕೋರಿಕೆ ಪಡೆದ ಬಳಿಕ ಗ್ರಾಹಕರಿಗೆ ನೀಡಲಾಗುತ್ತದೆ. ಮತ್ತು ಶುಲ್ಕದ ಪಾವತಿಯು ಕೆಳಗಿನ ಫೀಸು/ಶುಲ್ಕಗಳ ವಿಭಾಗದಲ್ಲಿ ಸೂಚಿಸಿದಂತೆ ಅನ್ವಯವಾಗಿರುತ್ತದೆ. ಸ್ವಾಧೀನ/ಬ್ಯಾಲೆನ್ಸ್ ಟ್ರಾನ್ಸ್‌ಫರ್ ಲೋನ್‌ಗಳ ಸಂದರ್ಭದಲ್ಲಿ, ಟೈಟಲ್ ಮತ್ತು ಲಿಂಕ್ ಡಾಕ್ಯುಮೆಂಟ್‌ಗಳ ಫೋಟೋಕಾಪಿಗಾಗಿ ಗ್ರಾಹಕರು ಸಲ್ಲಿಸುವ ಕೋರಿಕೆಯನ್ನು, ಟ್ರಾನ್ಸ್‌ಫರರ್ ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಟೈಟಲ್ ಮತ್ತು ಲಿಂಕ್ ಡಾಕ್ಯುಮೆಂಟ್‌ಗಳನ್ನು ಪಡೆದ ಬಳಿಕ ಈಡೇರಿಸಲಾಗುವುದು.

**(iii) ಲೋನ್ ಮುಕ್ತಾಯ/ ಟ್ರಾನ್ಸ್‌ಫರ್ ಮಾಡಿದಾಗ ಒರಿಜಿನಲ್ ಟೈಟಲ್ ಹಾಗೂ ಲಿಂಕ್ ಡಾಕ್ಯುಮೆಂಟ್‌ಗಳ ವಾಪಸಾತಿ** - ಸಿಇಆರ್‌ಎಸ್‌ಎಐ, ಅಡಮಾನ (ಸಮನಾದ ಅಡಮಾನ / ಸರಳ ಅಡಮಾನ), ಆರ್‌ಒಸಿ ಹಕ್ಕುಗಳು ಮುಂತಾದ ಯಾವುದೇ ನೋಂದಣಿ ಪ್ರಾಧಿಕಾರದೊಂದಿಗೆ ನೋಂದಣಿಯಾದ ಯಾವುದೇ ಹಕ್ಕುಗಳನ್ನು ತೆಗೆದು ಹಾಕುವುದರ ಜೊತೆಗೆ ಗ್ರಾಹಕರು ಎಲ್ಲಾ ಅಗತ್ಯ ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವ ನಿಬಂಧನೆಗೆ ಒಳಪಟ್ಟು, ಎಲ್ಲಾ ಲೋನ್‌ಗಳ ಪೂರ್ಣ ಮರುಪಾವತಿ / ಸೆಟಲ್ಮೆಂಟ್ ದಿನಾಂಕದಿಂದ 30 ದಿನಗಳ ಒಳಗೆ ಯಾವುದೇ ಅಡಮಾನ ಹಕ್ಕುಗಳನ್ನು ತೆಗೆದು ಹಾಕುವುದರ ಜೊತೆಗೆ ಬಿಎಚ್‌ಎಫ್‌ಎಲ್ ಪಡೆದ ಮೂಲ ಆಸ್ತಿ ಡಾಕ್ಯುಮೆಂಟ್‌ಗಳನ್ನು ಹಿಂತಿರುಗಿಸಲಾಗುತ್ತದೆ.

**14. ಕುಂದುಕೊರತೆ ನಿವಾರಣೆ**

ನಿಮ್ಮ ಸಂವಹನವನ್ನು ಸ್ವೀಕರಿಸಿದ 2 ವ್ಯವಹಾರ ದಿನಗಳಲ್ಲಿ ನೀವು ಸ್ವೀಕೃತಿ ದೃಢೀಕರಣ/ ಪ್ರತಿಕ್ರಿಯೆಯನ್ನು ಸ್ವೀಕರಿಸುತ್ತೀರಿ

| | |
|---|---|
| ಹಂತ 1 | ನಾವು 15 ದಿನಗಳ ಒಳಗೆ ಗ್ರಾಹಕರ ಪ್ರಶ್ನೆ/ಸಮಸ್ಯೆಗಳನ್ನು ಪರಿಹರಿಸಲು ಬದ್ಧರಾಗಿದ್ದೇವೆ. (ಹೆಚ್ಚಿನ ಸಮಯದ ಅಗತ್ಯವಿರುವ ಕೆಲವು ಸನ್ನಿವೇಶಗಳು ಗರಿಷ್ಠ 30 ದಿನಗಳನ್ನು ತೆಗೆದುಕೊಳ್ಳುತ್ತದೆ) ಈ ಸಮಯದೊಳಗೆ ನಮ್ಮಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದರೆ ಅಥವಾ ಗ್ರಾಹಕರ ದೂರಿಗೆ ದೊರೆತ ಪರಿಹಾರದಿಂದ ತೃಪ್ತಿ ಸಿಗದಿದ್ದರೆ, ಗ್ರಾಹಕರು ನಮಗೆ ಇಲ್ಲಿ ಬರೆಯಬಹುದು<br>bhflgrievance@bajajfinserv.in |
| ಹಂತ 2 | 2 ದಿನಗಳೊಳಗೆ ಹಂತ 1 ರಲ್ಲಿ ಒದಗಿಸಲಾದ ಪರಿಹಾರದಿಂದ ಗ್ರಾಹಕರು ತೃಪ್ತಿ ಆಗದಿದ್ದರೆ, ಗ್ರಾಹಕರು ಕಸ್ಟಮರ್ ಎಕ್ಸ್‌ಪೀರಿಯೆನ್ಸ್ ಮುಖ್ಯಸ್ಥರಿಗೆ ತಮ್ಮ ದೂರನ್ನು ಪೋಸ್ಟ್ ಮಾಡಬಹುದು<br>Bhflcustomerexperience@bajajfinserv.in<br><br>ಪರ್ಯಾಯವಾಗಿ, ಗ್ರಾಹಕರು ಕಸ್ಟಮ್ ಎಕ್ಸ್‌ಪೀರಿಯನ್ಸ್ ಮುಖ್ಯಸ್ಥರಿಗೆ ಪತ್ರ ಬರೆಯಬಹುದು: ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, 5ನೇ ಫ್ಲೋರ್, B2 ಸೆರೆಬ್ರಮ್ ಐಟಿ ಪಾರ್ಕ್, ಕುಮಾರ್ ಸಿಟಿ ಕಲ್ಯಾಣಿ ನಗರ, ಪುಣೆ, ಮಹಾರಾಷ್ಟ್ರ ಪಿನ್ - 411014 |

| | |
|---|---|
| ಹಂತ 3 | ಗ್ರಾಹಕರಿಗೆ ಹಂತ 2 ರಲ್ಲಿ ಒದಗಿಸಲಾದ ದೂರಿನ ಪರಿಹಾರದಿಂದ ತೃಪ್ತಿಯಾಗದಿದ್ದಲ್ಲಿ, 5 ದಿನಗಳ ಒಳಗೆ, ಗ್ರಾಹಕರು ಆತ/ಆಕೆಯ ದೂರನ್ನು ಮುಖ್ಯ **ಕುಂದುಕೊರತೆ ನಿವಾರಣಾ ಅಧಿಕಾರಿಗೆ** ಇಲ್ಲಿಗೆ ಸಲ್ಲಿಸಬಹುದು<br>hema.ratnam@bajajfinserv.in<br><br>ಪರ್ಯಾಯವಾಗಿ ಗ್ರಾಹಕರು ಇಲ್ಲಿಗೂ ಬರೆಯಬಹುದು<br>**ಕುಂದುಕೊರತೆ ನಿವಾರಣಾ ಅಧಿಕಾರಿ**<br>ಹೇಮ ರತ್ನಂ<br>ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್<br>5 ನೇ ಫ್ಲೋರ್ B2 ಸೆಲೆಬ್ರಂ ಐಟಿ ಪಾರ್ಕ್,<br>ಕುಮಾರ್ ಸಿಟಿ ಕಲ್ಯಾಣಿ ನಗರ ಪುಣೆ,<br>ಮಹಾರಾಷ್ಟ್ರ ಪಿನ್- 411014 |
| ಹಂತ 4 | ಗ್ರಾಹಕರಿಗೆ ಸಮಾಧಾನ ಆಗುವಂತೆ ದೂರನ್ನು ಪರಿಹರಿಸದಿದ್ದಲ್ಲಿ, ದೂರು ಸಲ್ಲಿಸಿದ ದಿನಾಂಕದಿಂದ 30 ದಿನಗಳ ಒಳಗೆ, ಗ್ರಾಹಕರು ಆನ್‌ಲೈನ್ ವಿಧಾನದಲ್ಲಿ https://grids.nhbonline.org.in ಲಿಂಕ್ ಮೂಲಕ ಅಥವಾ ಕೆಳಗೆ ನೀಡಲಾದ ವಿಳಾಸಕ್ಕೆ ಪೋಸ್ಟ್ ಮಾಡುವ ಮೂಲಕ ಆಫ್‌ಲೈನ್ ವಿಧಾನದಲ್ಲಿ, https://nhb.org.in/ ನಲ್ಲಿ ಕುಂದುಕೊರತೆಗಳ ವಿಭಾಗದಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದೂರು ಸಲ್ಲಿಸುವ ಮೂಲಕ National Housing Bank ಅನ್ನು ಸಂಪರ್ಕಿಸಬಹುದು<br><br>**ನ್ಯಾಷನಲ್ ಹೌಸಿಂಗ್ ಬ್ಯಾಂಕ್,**<br>ನಿಯಂತ್ರಣ ಮತ್ತು ಮೇಲ್ವಿಚಾರಣೆ ಇಲಾಖೆ,<br>(ದೂರು ಪರಿಹಾರ ವಿಭಾಗ),<br>4ನೇ ಮಹಡಿ, ಕೋರ್-5A, ಇಂಡಿಯಾ ಹ್ಯಾಬಿಟೇಟ್ ಸೆಂಟರ್,<br>ಲೋಧಿ ರೋಡ್,<br>ನವದೆಹಲಿ - 110003 |

15. **ಕುಂದುಕೊರತೆ ಪ್ರಕ್ರಿಯೆ**

ಸಾಲಗಾರರು bhflgrievance@bajajfinserv.in ಗೆ ಬರೆದಾಗ ಈ ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ :

- ಗ್ರಾಹಕರ ಪ್ರಶ್ನೆ / ದೂರನ್ನು ಅರ್ಥಮಾಡಿಕೊಳ್ಳಲು ಗ್ರಾಹಕ ಸೇವಾ ಸಹಾಯಕರು ಸಂಪೂರ್ಣ ಇಮೇಲ್ ಅನ್ನು ಓದುತ್ತಾರೆ
- ಗ್ರಾಹಕರು ತಿಳಿಸಿದ ಮತ್ತು ತಿಳಿಸದ ಅವಶ್ಯಕತೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅವರನ್ನು ಸಂಪರ್ಕಿಸಲಾಗಿದೆ
- ಕುಂದುಕೊರತೆ ತಂಡವು ನಿಗದಿತ ಕಾಲಮಿತಿಯಲ್ಲಿ ದೂರನ್ನು ಪರಿಹರಿಸಲು ಆಂತರಿಕ ಇಲಾಖೆಗಳೊಂದಿಗೆ ಸಂಪರ್ಕ ಸಾಧಿಸುತ್ತದೆ.
- ಆಂತರಿಕ ಹಾಗೂ ಇತರೆ ಕಾರಣಗಳಿಂದಾಗಿ, 15 ದಿನಗಳ ಒಳಗಾಗಿ ಸೂಚಿಸಿದ ಟಿಎಟಿ ಪರಿಹಾರ ಸಾಧ್ಯವಾಗದಿದ್ದರೆ, ಸಾಲಗಾರರಿಗೆ ಮಧ್ಯಂತರ ಪ್ರತಿಕ್ರಿಯೆ ಮತ್ತು ಟೈಮ್‌ಲೈನ್ ಮಾಹಿತಿಯನ್ನು ಕಳುಹಿಸಲಾಗುತ್ತದೆ.
- ಎಲ್ಲಾ ಪ್ರಶ್ನೆಗಳನ್ನು, ಇಮೇಲ್ ಮತ್ತು ದೂರವಾಣಿ ಕರೆಯ ಮೂಲಕ ಉತ್ತರಿಸಿ ಪರಿಹರಿಸಲಾಗುವುದು.

ಕಾಲಮಿತಿಯನ್ನು ವಿಸ್ತರಿಸುವ ಸಂದರ್ಭ ಬಂದಾಗ ಸಾಲಗಾರರಿಗೆ ಸಮಯಕ್ಕೆ ಸರಿಯಾಗಿ ಅಪ್ಡೇಟ್ ಕಳುಹಿಸಲಾಗುತ್ತದೆ.

16. **ಫೀಸು ಮತ್ತು ಇತರೆ ಶುಲ್ಕಗಳು**

ಮೇಲೆ ನಮೂದಿಸಿರುವ ಫೀಸು/ಶುಲ್ಕಗಳು ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ಯಾವುದೇ ಬದಲಾವಣೆಗಳ ಬಗ್ಗೆ ತಿಳಿಯಲು, ಸಾಲಗಾರರು ಸಾಲದಾತರ ವೆಬ್‌ಸೈಟ್ https://www.bajajhousingfinance.in/notice-board ನಲ್ಲಿ ನಮೂದಿಸಿರುವ ಇತ್ತೀಚಿನ ಶುಲ್ಕಗಳ ವೇಳಾಪಟ್ಟಿಯನ್ನು ನೋಡಬೇಕಾಗಿ ವಿನಂತಿ, ಇದು ಅನ್ವಯವಾಗುತ್ತದೆ.

ಈ ಕೆಳಗೆ ನಮೂದಿಸಿದ ಫೀಸು/ಶುಗಳು, ಸಾಲಗಾರರು ಪಾವತಿಸಬೇಕಾದ ಗರಿಷ್ಠ ಫೀಸು/ಶುಲ್ಕದ ಮೊತ್ತವನ್ನು ಸೂಚಿಸುತ್ತವೆ.. ಲೋನ್ ಡಾಕ್ಯುಮೆಂಟ್‌ಗಳಲ್ಲಿ ನಮೂದಿಸಿದ ಫೀಸು/ಶುಲ್ಕಗಳು, ಪಾವತಿಸಬೇಕಾದ ನಿಖರ ಮೊತ್ತವನ್ನು ಸೂಚಿಸುತ್ತವೆ. ನಿರ್ದಿಷ್ಟವಾಗಿ ನಮೂದಿಸದಿ/ದ್ದಲ್ಲಿ, ಪಾವತಿಸಲಾದ ಫೀಸು/ಶುಲ್ಕಗಳನ್ನು ರಿಫಂಡ್ ಮಾಡಲಾಗುವುದಿಲ್ಲ.

| **ಕ್ರ. ಸಂ.** | **ಫೀಸು/ಶುಲ್ಕದ ಸ್ವರೂಪ** | **ಫೀಸು / ಶುಲ್ಕದ ಹೆಸರು** | **ಯಾವಾಗ ಪಾವತಿಸಬೇಕು** | **ಫ್ರೀಕ್ವೆನ್ಸಿ** | **ಮೊತ್ತ** |
|---|---|---|---|---|---|
| 1. | ಹೋಮ್ ಲೋನ್/ಆಸ್ತಿ ಮೇಲಿನ ಲೋನ್‌ಗೆ ತಗುಲುವ ಶುಲ್ಕಗಳು | ಪ್ರಕ್ರಿಯಾ ಶುಲ್ಕಗಳು / | ಅಪ್ಲಿಕೇಶನ್‌ನಲ್ಲಿ | ಒಮ್ಮೆ | ಲೋನ್ ಮೊತ್ತದ 4% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 2. | ಟಾಪ್-ಅಪ್ ಲೋನಿಗೆ ಶುಲ್ಕಗಳು | ಪ್ರಕ್ರಿಯಾ ಶುಲ್ಕಗಳು / | ಅಪ್ಲಿಕೇಶನ್‌ನಲ್ಲಿ | ಒಮ್ಮೆ | ಲೋನ್ ಮೊತ್ತದ 4% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 3. | ಸುರಕ್ಷಿತವಲ್ಲದ ಲೋನಿಗೆ ಶುಲ್ಕಗಳು | ಪ್ರಕ್ರಿಯಾ ಶುಲ್ಕಗಳು / | ಅಪ್ಲಿಕೇಶನ್‌ನಲ್ಲಿ | ಒಮ್ಮೆ | ಲೋನ್ ಮೊತ್ತದ 4% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 4. | ಖರ್ಚು ಸರಿದೂಗಿಸಲು ಮಾಡುವ ವೆಚ್ಚಗಳು | ಪ್ರಾಸಂಗಿಕ ಶುಲ್ಕಗಳು | ಎದುರಾಗುವ ಖರ್ಚುಗಳ ಮೇಲೆ | | ಆಕ್ಚುಯಲ್‌ಗಳ ಮೇಲೆ |
| 5. | ಶಾಸನಬದ್ಧ ಶುಲ್ಕಗಳು | ಸ್ಟ್ಯಾಂಪ್ ಡ್ಯೂಟಿ/ಎಂಒಡಿಟಿ /ಎಂಒಇ | ಸಂಬಂಧಿತ ಕಾನೂನುಗಳ ಪ್ರಕಾರ | ಒಮ್ಮೆ | ದೇಶೀಯ ಕಾನೂನುಗಳ ಪ್ರಕಾರ ಅನ್ವಯವಾಗುತ್ತದೆ |
| 6. | ಕಡಿಮೆ ದರಕ್ಕೆ ಬದಲಾಯಿಸಿ | ಶುಲ್ಕ ಬದಲಾಯಿಸಿ | ದರ ಪರಿಷ್ಕರಣೆಯ ಮೇಲೆ | ಪ್ರತಿ ದರ ಪರಿಷ್ಕರಣೆಯ ಮೇಲೆ | ಬಾಕಿ ಅಸಲಿನ 2% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 7. | ಬಡ್ಡಿ ಲೆಕ್ಕಾಚಾರದ ವಿಧಾನ ಬದಲಾಯಿಸಿ (ಉದಾ. ಬಿಎಚ್‌ಎಫ್‌ಎಲ್ ಎಫ್ | ಶುಲ್ಕ ಬದಲಾಯಿಸಿ | ಬಡ್ಡಿ ಲೆಕ್ಕಾಚಾರದ | ಪ್ರತಿ ಬದಲಾವಣೆ ಮೇಲೆ | ಬಾಕಿ ಅಸಲಿನ 2% ವರೆಗೆ + ಅನ್ವಯವಾಗುವ ಜಿಎಸ್‌ಟಿ |

| ಕ್ರ. ಸಂ. | ಫೀಸು/ಶುಲ್ಕದ ಸ್ವರೂಪ | ಫೀಸು / ಶುಲ್ಕದ ಹೆಸರು | ಯಾವಾಗ ಪಾವತಿಸಬೇಕು | ಫ್ರೀಕ್ವೆನ್ಸಿ | ಮೊತ್ತ |
|---|---|---|---|---|---|
| | ಆರ್‌ಆರ್ ನಿಂದ ರೆಪೋ ದರಕ್ಕೆ ಅಥವಾ ಬೇರೆ ರೀತಿಯಾಗಿ) | | ಬದಲಾವಣೆಯ ಮೇಲೆ | | |
| 8. | ಅಡಮಾನ ಮೂಲ ಶುಲ್ಕಗಳು (ಎಂಒಎಫ್) (ರಿಫಂಡ್ ಮಾಡಲಾಗದ ಮೊತ್ತ) - ಸುರಕ್ಷಿತ ಲೋನ್‌ಗಳಿಗೆ | ಪ್ರಕ್ರಿಯಾ ಶುಲ್ಕದ ಮೇಲೆ ಎಂಒಎಫ್ | ಅಪ್ಲಿಕೇಶನ್‌ನಲ್ಲಿ | ಒಮ್ಮೆ | ರೂ. 10000 ವರೆಗೆ + ಜಿಎಸ್‌ಟಿ ಅನ್ವಯವಾಗುವಂತೆ |
| 9 | ಚೆಕ್ ಸ್ವಾಪ್ ಶುಲ್ಕಗಳು | ವಿವಿಧ ಸ್ವೀಕೃತಿಗಳು | ಮನವಿ ಪ್ರಕಾರ | ಅದರಂತೆ ಮತ್ತು ಯಾವಾಗ | ಎದುರಾಗುವ ಖರ್ಚುಗಳ ಅನುಸಾರ |
| 10 | ಸೆಕ್ಯೂರಿಟಿ ಸ್ವಾಪ್ ಶುಲ್ಕಗಳು | ಇತರೆ ಸ್ವೀಕೃತಿಗಳು | ಮನವಿ ಪ್ರಕಾರ | ಅದರಂತೆ ಮತ್ತು ಯಾವಾಗ | ಎದುರಾಗುವ ಖರ್ಚುಗಳ ಅನುಸಾರ |
| 11 | ಬಾಹ್ಯ / ಕಾನೂನು / ತಾಂತ್ರಿಕ ಅಭಿಪ್ರಾಯದ ಕಾರಣ ಶುಲ್ಕಗಳು | ವಿವಿಧ ಸ್ವೀಕೃತಿಗಳು | ಎದುರಾಗುವ ಖರ್ಚುಗಳ ಮೇಲೆ | ಅದರಂತೆ ಮತ್ತು ಯಾವಾಗ | ಎದುರಾಗುವ ಖರ್ಚುಗಳ ಪ್ರಕಾರ |
| 12 | ಮಂಜೂರಾತಿಯಿಂದ 6 ತಿಂಗಳ ನಂತರ ಲೋನ್ ಮೌಲ್ಯಮಾಪನ | ಪ್ರಕ್ರಿಯಾ ಶುಲ್ಕ | ಮರು - ಅಪ್ಲಿಕೇಶನ್‌ನಲ್ಲಿ | ಒಂದು ಬಾರಿ | ಅಡಮಾನ ಒರಿಜಿನೇಶನ್ ಶುಲ್ಕ ಅನ್ವಯವಾಗುವಂತೆ |
| 13 | ಅಕೌಂಟ್ ಸ್ಟೇಟ್ಮೆಂಟಿನ ಹಾರ್ಡ್ ಕಾಪಿ | ವಿವಿಧ ರಶೀದಿಗಳು | ಕೋರಿಕೆ ಮೇರೆಗೆ | ಪ್ರತಿ ಮನವಿಗೆ | ಪ್ರತಿ ಕೋರಿಕೆಗೆ ರೂ. 500 ವರೆಗೆ + ಜಿಎಸ್‌ಟಿ ಅನ್ವಯವಾಗುವಂತೆ |
| 14 | ಈಗಿರುವ ಲೋನಿನಿಂದ ಹೊಸ ಪ್ರಾಡಕ್ಟ್‌ಗೆ ಪರಿವರ್ತನೆ (ಟರ್ಮ್ ಲೋನ್/ಫ್ಲೆಕ್ಸಿ ಟರ್ಮ್ ಲೋನ್/ಫ್ಲೆಕ್ಸಿ ಹೈಬ್ರಿಡ್ ಲೋನ್) | ಪರಿವರ್ತನೆ ಶುಲ್ಕ | ಪರಿವರ್ತನೆಯ ಮೇಲೆ | ಪ್ರತಿ ಪರಿವರ್ತನೆಯ ಮೇಲೆ | ಬಾಕಿ ಅಸಲಿನ 2% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 15 | ಫಿಕ್ಸೆಡ್ ದರದ ಲೋನ್‌ನಿಂದ ಫ್ಲೋಟಿಂಗ್ ದರದ ಲೋನ್‌ಗೆ ಬದಲಾಯಿಸಲು ಪರಿವರ್ತನಾ ಶುಲ್ಕಗಳು | ಪರಿವರ್ತನೆ ಶುಲ್ಕ | ಪರಿವರ್ತನೆಯ ಮೇಲೆ | ಘಟನೆ | ಟರ್ಮ್ ಲೋನ್‌ಗಳಿಗಾಗಿ:- ಅಸಲು ಬಾಕಿ + ವಿತರಿಸದ ಮೊತ್ತಕ್ಕೆ (ಯಾವುದಾದರೂ ಇದ್ದರೆ) ಅನ್ವಯವಾಗುವಂತೆ 1% ವರೆಗೆ + ಜಿಎಸ್‌ಟಿ. |

| ಕ್ರ. ಸಂ. | ಫೀಸು/ಶುಲ್ಕದ ಸ್ವರೂಪ | ಫೀಸು / ಶುಲ್ಕದ ಹೆಸರು | ಯಾವಾಗ ಪಾವತಿಸಬೇಕು | ಫ್ರೀಕ್ವೆನ್ಸಿ | ಮೊತ್ತ |
|---|---|---|---|---|---|
| | | | | | ಫ್ಲೆಕ್ಸಿ ಟರ್ಮ್ ಲೋನ್‌ಗಳು ಅಥವಾ ಫ್ಲೆಕ್ಸಿ ಹೈಬ್ರಿಡ್ ಲೋನ್‌ಗಳಿಗಾಗಿ:-<br>ಫ್ಲೆಕ್ಸಿ ಮಿತಿ +ವಿತರಿಸದ ಮೊತ್ತದ (ಯಾವುದಾದರೂ ಇದ್ದರೆ) ಮೇಲೆ ಅನ್ವಯವಾಗುವಂತೆ 1% ವರೆಗೆ + ಜಿಎಸ್‌ಟಿ. |
| 16 | ಫ್ಲೋಟಿಂಗ್ ದರದ ಲೋನ್‌ನಿಂದ ಫಿಕ್ಸೆಡ್ ದರದ ಲೋನ್‌ಗೆ ಬದಲಾಯಿಸಲು ಪರಿವರ್ತನಾ ಶುಲ್ಕಗಳು:<br>ಟರ್ಮ್ ಲೋನ್‌ಗಳಿಗಾಗಿ | ಪರಿವರ್ತನೆ ಶುಲ್ಕ | ಪರಿವರ್ತನೆಯ ಮೇಲೆ | ಘಟನೆ | ಟರ್ಮ್ ಲೋನ್‌ಗಳಿಗಾಗಿ:-<br>ಅಸಲು ಬಾಕಿ + ವಿತರಿಸದ ಮೊತ್ತಕ್ಕೆ (ಯಾವುದಾದರೂ ಇದ್ದರೆ) ಅನ್ವಯವಾಗುವಂತೆ 1% ವರೆಗೆ + ಜಿಎಸ್‌ಟಿ.<br><br>ಫ್ಲೆಕ್ಸಿ ಟರ್ಮ್ ಲೋನ್‌ಗಳು ಅಥವಾ ಫ್ಲೆಕ್ಸಿ ಹೈಬ್ರಿಡ್ ಲೋನ್‌ಗಳಿಗಾಗಿ:-<br>ಫ್ಲೆಕ್ಸಿ ಮಿತಿ +ವಿತರಿಸದ ಮೊತ್ತದ (ಯಾವುದಾದರೂ ಇದ್ದರೆ) ಮೇಲೆ ಅನ್ವಯವಾಗುವಂತೆ 1% ವರೆಗೆ + ಜಿಎಸ್‌ಟಿ.<br><br>ಗಮನಿಸಿ: ಆ ದಿನಾಂಕದಂದು ನಿಮ್ಮ ಲೋನ್ ಅಕೌಂಟ್ ಮೇಲೆ ಅನ್ವಯವಾಗುವ ಬಡ್ಡಿ ದರದ ಮೇಲೆ ಕಂಪನಿಯು 200 ಬಿಪಿಎಸ್ (2% ಪಿ.ಎ.) ಹೆಚ್ಚುವರಿ ಬಡ್ಡಿ ದರದ ರಿಸ್ಕ್ ಪ್ರೀಮಿಯಂ ಅನ್ನು ವಿಧಿಸುತ್ತದೆ. |
| 17 | ಫ್ಲೆಕ್ಸಿ ಲೋನ್ ಶುಲ್ಕ | ಪ್ರಕ್ರಿಯಾ ಶುಲ್ಕಗಳು | ಫ್ಲೆಕ್ಸಿ ಟರ್ಮ್ ಲೋನ್ ಅಥವಾ ಫ್ಲೆಕ್ಸಿ ಹೈಬ್ರಿಡ್ ಲೋನ್ ಪಡೆದಾಗ | ಒಮ್ಮೆ | ಲೋನ್ ಮೊತ್ತದ 2% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 18 | ಫ್ಲೆಕ್ಸಿ ವಾರ್ಷಿಕ ನಿರ್ವಹಣಾ ಶುಲ್ಕ - ಫ್ಲೆಕ್ಸಿ ಹೈಬ್ರಿಡ್ ಲೋನ್ | ವಾರ್ಷಿಕ ನಿರ್ವಹಣಾ ಶುಲ್ಕ | ಫ್ಲೆಕ್ಸಿ ಹೈಬ್ರಿಡ್ ಲೋನ್ ಮೇಲೆ ಅನ್ವಯವಾಗುತ್ತದೆ | ವಾರ್ಷಿಕ ಶುಲ್ಕ | ಬಡ್ಡಿ ಮಾತ್ರ ಪಾವತಿಸುವ ಫ್ಲೆಕ್ಸಿ ಲೋನ್ ಮರುಪಾವತಿ ಅವಧಿಯಲ್ಲಿ ಮಂಜೂರಾದ ಮೊತ್ತದ 1% ವರೆಗೆ + ಅನ್ವಯವಾಗುವ ಜಿಎಸ್‌ಟಿ ಮತ್ತು ಫ್ಲೆಕ್ಸಿ ಟರ್ಮ್ ಲೋನ್ |

| ಕ್ರ. ಸಂ. | ಫೀಸು/ಶುಲ್ಕದ ಸ್ವರೂಪ | ಫೀಸು / ಶುಲ್ಕದ ಹೆಸರು | ಯಾವಾಗ ಪಾವತಿಸಬೇಕು | ಫ್ರೀಕ್ವೆನ್ಸಿ | ಮೊತ್ತ |
|---|---|---|---|---|---|
| | | | | | ಅವಧಿಯಲ್ಲಿ ಲಭ್ಯವಿರುವ ಫ್ಲೆಕ್ಸಿ ಲೋನ್ ಮಿತಿಯ 1% ವರೆಗೆ + ಅನ್ವಯವಾಗುವ GST |
| 19 | ಫ್ಲೆಕ್ಸಿ ವಾರ್ಷಿಕ ನಿರ್ವಹಣಾ ಶುಲ್ಕ - ಫ್ಲೆಕ್ಸಿ ಟರ್ಮ್ ಲೋನ್ | ವಾರ್ಷಿಕ ನಿರ್ವಹಣಾ ಶುಲ್ಕ | ಫ್ಲೆಕ್ಸಿ ಟರ್ಮ್ ಲೋನ್ ಮೇಲೆ ಅನ್ವಯವಾಗುತ್ತದೆ | ವಾರ್ಷಿಕ ಶುಲ್ಕ | ಲಭ್ಯವಿರುವ ಫ್ಲೆಕ್ಸಿ ಲೋನ್ ಮಿತಿಯ 1% ವರೆಗೆ + ಅನ್ವಯವಾಗುವ ಜಿಎಸ್‌ಟಿ |
| 20 | CERSAI ಶುಲ್ಕಗಳು (ಸುರಕ್ಷಿತ ಲೋನ್‌ಗಳಿಗೆ) | ಸಿಇಆರ್‌ಎಸ್‌ಎಐ ನೋಂದಣಿಯ ಶುಲ್ಕಗಳು | ಅಪ್ಲಿಕೇಶನ್‌ನಲ್ಲಿ | ಒಮ್ಮೆ | ಪ್ರತಿ ಲೋನಿಗೆ, ಸಿಇಆರ್‌ಎಸ್‌ಎಐ ವಿಧಿಸುವ ಶುಲ್ಕಗಳು +ಜಿಎಸ್‌ಟಿ ಅನ್ವಯವಾಗುವಂತೆ |
| 21 | ಟೈಟಲ್ ಡಾಕ್ಯುಮೆಂಟ್‌ಗಳ ಫೋಟೋಕಾಪಿಗೆ ತಗುಲುವ ಶುಲ್ಕ (ಸುರಕ್ಷಿತ ಲೋನ್‌ಗಳಿಗೆ) | ವಿವಿಧ ರಶೀದಿಗಳು | ಕೋರಿಕೆ ಮೇರೆಗೆ | ಪ್ರತಿ ಮನವಿಗೆ | 30 ಪುಟಗಳವರೆಗೆ ಕನಿಷ್ಠ ಶುಲ್ಕ ರೂ. 500/- ಮತ್ತು ನಂತರದ ಪ್ರತಿ ಹೆಚ್ಚುವರಿ ಪುಟಕ್ಕೆ ರೂ. 3/- + ಅನ್ವಯವಾಗುವ ಜಿಎಸ್‌ಟಿ |
| 22 | ಮುಚ್ಚಿದ ಲೋನ್‌ಗಳ ಮೇಲೆ ಡಾಕ್ಯುಮೆಂಟ್ ಮರುಪಡೆಯುವಿಕೆ ಶುಲ್ಕಗಳು (ರಿ-ವಾಲ್ಟಿಂಗ್ ಶುಲ್ಕಗಳು) | ಇತರೆ ರಸೀತಿಗಳು | ಮನವಿ ಪ್ರಕಾರ | ಪ್ರತಿ ಮನವಿ | ಬಿಎಚ್‌ಎಫ್‌ಎಲ್‌ನಿಂದ `ಮೂಲ ಆಸ್ತಿ ಪತ್ರಗಳ ಸಂಗ್ರಹಣೆ' ಕುರಿತ ಸಂವಹನ ವಿತರಣೆಯಾದ 15 ದಿನಗಳಲ್ಲಿ ಸಾಲಗಾರರಿಂದ ಮುಚ್ಚಿದ ಲೋನಿನ ಮೂಲ ಡಾಕ್ಯುಮೆಂಟ್‌ಗಳನ್ನು ಸಂಗ್ರಹಿಸದಿದ್ದರೆ ರೂ. 1000/- (GST ಸೇರಿದಂತೆ) ಶುಲ್ಕ ಅನ್ವಯವಾಗುತ್ತದೆ |

**23. ಪೆನಲ್ ಶುಲ್ಕಗಳು:**

**a) ಬೌನ್ಸ್ ಶುಲ್ಕಗಳು - ಈ ಕೆಳಗಿನ ಟೇಬಲ್‌ನಲ್ಲಿ ನಮೂದಿಸಿದ ಇಎಂಐ ಬೌನ್ಸ್ ಸಂದರ್ಭದಲ್ಲಿ ಅನ್ವಯವಾಗುತ್ತದೆ.**

**b) ತಡವಾದ ಪಾವತಿ ಶುಲ್ಕಗಳು (ಎಲ್‌ಪಿಸಿ)- ಪಾವತಿಸದ ದಿನಾಂಕದಿಂದ / ಭಾಗಶಃ ಪಾವತಿಸಿದ ಇಎಂಐಯಿಂದ ಆರಂಭವಾಗುವ ಪ್ರತಿ ಇಎಂಐಗೆ ಈ ಕೆಳಗಿನ ಟೇಬಲ್‌ನಲ್ಲಿ ನಮೂದಿಸಿದಂತೆ ಇಎಂಐ ಪೂರ್ಣ ಬಾಕಿ ಮೊತ್ತವನ್ನು ಪಡೆಯುವವರೆಗೆ ದೈನಂದಿನವಾಗಿ ಲೆಕ್ಕಾಚಾರ ಮಾಡಲಾಗುತ್ತದೆ. ಸ್ವೀಕೃತಿ ಆಧಾರದ ಮೇಲೆ ಎಲ್‌ಪಿಸಿ ಅನ್ನು ಲೆಕ್ಕ ಹಾಕಲಾಗುತ್ತದೆ. ಈ ಶುಲ್ಕಗಳನ್ನು ಕ್ಯಾಪಿಟಲೈಸ್ ಮಾಡಲಾಗುವುದಿಲ್ಲ.**

| ಮಂಜೂರಾದ ಲೋನ್ ಮೊತ್ತ | ತಡವಾದ ಪಾವತಿ ಶುಲ್ಕಗಳು (ಎಲ್‌ಪಿಸಿ)^(ಪ್ರತಿ ಭಾಗಶಃ ಅಥವಾ ಸಂಪೂರ್ಣವಾಗಿ ಗಡುವು ಮೀರಿದ ಇಎಂಐಗೆ ಪ್ರತಿ ದಿನಕ್ಕೆ ಶುಲ್ಕ ವಿಧಿಸಲಾಗುತ್ತದೆ) | | | ಬೌನ್ಸ್ ಶುಲ್ಕಗಳು ^ (ಚೆಕ್ / ಇಸಿಎಸ್ / ನಾಚ್‌ನ ಪ್ರತಿಯೊಂದು ಅಮಾನ್ಯತೆಗೆ) |
|---|---|---|---|---|
| | ಎಚ್‌ಎಲ್ (ರೂ.) | ಟಾಪ್ ಅಪ್ / ಭದ್ರತೆ ರಹಿತ(ರೂ.) | ಎಲ್‌ಎಪಿ(ರೂ.) | (ರೂ.) |
| ರೂ. 15 ಲಕ್ಷದವರೆಗೆ | 3 | 3 | 3 | 500/- |
| > ರೂ. 15 ಲಕ್ಷದಿಂದ ರೂ. 30 ಲಕ್ಷಗಳವರೆಗೆ | 10 | 10 | 10 | 500/- |
| > ರೂ. 30 ಲಕ್ಷದಿಂದ ರೂ. 50 ಲಕ್ಷಗಳವರೆಗೆ | 15 | 15 | 15 | 1000/- |
| > ರೂ. 50 ಲಕ್ಷದಿಂದ ರೂ. 1 ಕೋಟಿ | 30 | 30 | 30 | 1000/- |
| > ರೂ. 1 ಕೋಟಿಯಿಂದ ರೂ. 5 ಕೋಟಿಗಳು | 125 | 125 | 125 | 3,000/- |
| > ರೂ. 5 ಕೋಟಿಯಿಂದ ರೂ. 10 ಕೋಟಿಗಳು | 150 | 150 | 150 | 3,000/- |
| > ರೂ. 10 ಕೋಟಿಯಿಂದ ರೂ. 25 ಕೋಟಿಗಳವರೆಗೆ | 175 | 175 | 175 | 10,000/- |
| > ರೂ. 25 ಕೋಟಿಯಿಂದ ರೂ. 50 ಕೋಟಿಗಳು | 200 | 200 | 200 | 10,000/- |
| > ರೂ. 50 ಕೋಟಿಯಿಂದ ರೂ. 100 ಕೋಟಿಗಳು | 400 | 400 | 400 | 10,000/- |
| > ರೂ. 100 ಕೋಟಿಯಿಂದ ರೂ. 250 ಕೋಟಿಗಳು | 1000 | 1000 | 1000 | 10,000/- |
| > ರೂ. 250 ಕೋಟಿಯಿಂದ ರೂ. 500 ಕೋಟಿಗಳವರೆಗೆ | 2000 | 2000 | 2000 | 10,000/- |
| > 500 ಕೋಟಿಗಳು | 4000 | 4000 | 4000 | 10,000/- |

^ಮೇಲೆ ತಿಳಿಸಲಾದ ಶುಲ್ಕಗಳು ಈ ಎಂಐಟಿಸಿಗೆ ಸಹಿ ಮಾಡುವ ದಿನಾಂಕದಂದು ಅನ್ವಯವಾಗುತ್ತವೆ. ಈ ಶುಲ್ಕಗಳು ಮಾರ್ಪಾಡಿಗೆ ಒಳಪಟ್ಟಿರುತ್ತವೆ ಮತ್ತು ಕಂಪನಿಯ ವೆಬ್‌ಸೈಟ್ (https://www.bajajhousingfinance.in/) ನಲ್ಲಿ ನಮೂದಿಸಿದಂತೆ ಪರಿಷ್ಕೃತ ಶುಲ್ಕಗಳು ಅನ್ವಯವಾಗುತ್ತವೆ. ಮೇಲೆ ತಿಳಿಸಿದ ಎಲ್ಲಾ ಶುಲ್ಕಗಳು ಜಿಎಸ್‌ಟಿ (ಅನ್ವಯವಾದರೆ) ಅಥವಾ ಯಾವುದೇ ಇತರ ಸರ್ಕಾರಿ ಶುಲ್ಕಗಳನ್ನು ಒಳಗೊಂಡಿರುವುದಿಲ್ಲ ಎಂಬುದನ್ನು ಸಾಲಗಾರರು ಒಪ್ಪುತ್ತಾರೆ.

24. ವಸ್ತು ನಿಯಮಗಳು ಮತ್ತು ಷರತ್ತುಗಳನ್ನು ಅನುಸರಿಸದಿರುವುದಕ್ಕಾಗಿ ಒಪ್ಪಂದದ ಪರಿಪೂರ್ಣತೆ ಶುಲ್ಕ ("ಸಿಪಿಸಿ"):

ಸಾಲಗಾರರು ಲೋನಿನ ವಸ್ತು ನಿಯಮಗಳು ಮತ್ತು ಷರತ್ತುಗಳನ್ನು ಅನುಸರಿಸದಿರುವ ಸನ್ನಿವೇಶಗಳಲ್ಲಿ ಕಂಪನಿಯು ಸಂಪೂರ್ಣ ಶುಲ್ಕಗಳನ್ನು ವಿಧಿಸುತ್ತದೆ. ಒಪ್ಪಂದದ ಪರಿಪೂರ್ಣತೆಯ ಶುಲ್ಕಗಳನ್ನು ವಿಧಿಸಲು ಅವುಗಳ ಸಂಬಂಧಿತ ಪ್ರಚೋದಕ ಅಂಶಗಳು ಮತ್ತು ವಿಧಿಸುವಿಕೆ ಹಾಗೂ ಸ್ಥಗಿತಗೊಳಿಸುವಿಕೆಯೊಂದಿಗೆ ವಿವಿಧ ಸನ್ನಿವೇಶಗಳನ್ನು ಕೆಳಗೆ ವಿವರಿಸಲಾಗಿದೆ:

| ಕ್ರ. ಸಂ. | ವಸ್ತು ನಿಯಮಗಳು ಮತ್ತು ಷರತ್ತುಗಳು | ಪ್ರಚೋದಕ ಅಂಶ | ಶುಲ್ಕ ವಿಧಿಸುವಿಕೆ / ಸ್ಥಗಿತಗೊಳಿಸುವಿಕೆ | | ಸಿಪಿಸಿ (ಪ್ರತಿ ತಿಂಗಳಿಗೆ ಶುಲ್ಕ ವಿಧಿಸಲಾಗುತ್ತದೆ) * (ರೂ.) | |
|---|---|---|---|---|---|---|
| 1 | ಅನ್ವಯವಾಗುವಲ್ಲಿ ಟೈಟಲ್ ಡಾಕ್ಯುಮೆಂಟ್ / ಭದ್ರತಾ ಪರಿಪೂರ್ಣತಾ ಡಾಕ್ಯುಮೆಂಟ್ / ಎಂಒಡಿಟಿ / ಎಂಒಇ / ಅಡಮಾನ ಪತ್ರ / ಆರ್‌ಒಸಿ ಶುಲ್ಕ ರಚನೆ ಸಲ್ಲಿಸದಿರುವುದು | ಮೊದಲ ವಿತರಣೆ ದಿನಾಂಕದಿಂದ 90 ದಿನಗಳು | ಲೆವಿ | ಕೆಟಗರಿಯಲ್ಲಿರುವ ಯಾವುದೇ ಒಂದು ಅಥವಾ ಎಲ್ಲಾ ಪ್ರಮುಖವಾದವುಗಳನ್ನು ಅನುಸರಿಸದಿರುವುದರ ಮೇಲೆ | ಹೋಮ್ ಲೋನ್ (ಎಚ್‌ಎಲ್)/ಆಸ್ತಿ ಮೇಲಿನ ಲೋನ್ (ಎಲ್‌ಎಪಿ) | 3,000/- |
| | | | | | ಟಾಪ್ ಅಪ್/ ಭದ್ರತೆ ರಹಿತ | - |
| | | | ಸ್ಥಗಿತತೆ | ನಿಗದಿತ ದಿನಾಂಕದಿಂದ ಮುಂದಿನ ಕ್ಯಾಲೆಂಡರ್ ತಿಂಗಳು | - | - |
| 2 | ಅಸ್ತಿತ್ವದಲ್ಲಿರುವ ಮ್ಯಾಂಡೇಟ್ ಅಮಾನ್ಯ / ನಿಷ್ಕ್ರಿಯ / ಬ್ಯಾಂಕ್ ಅಕೌಂಟ್ ಮುಚ್ಚಲಾಗಿದ್ದರೆ / ಬ್ಯಾಂಕ್ ಅಕೌಂಟ್ ಫ್ರೋಜನ್ / ಇತರ ತಾಂತ್ರಿಕ ಸಮಸ್ಯೆ ಇರುವ ಸಂದರ್ಭದಲ್ಲಿ ಪರಿಷ್ಕೃತ ನಾಚ್ / ಇಸಿಎಸ್ ಡೆಬಿಟ್ ಮ್ಯಾಂಡೇಟ್ ನೋಂದಣಿಯನ್ನು ಸಲ್ಲಿಸದಿರುವುದು | 90 ದಿನಗಳ ಅವಧಿಯಲ್ಲಿ ಮ್ಯಾಂಡೇಟ್ ನೋಂದಣಿ ಸಮಸ್ಯೆಯನ್ನು ಸರಿಪಡಿಸದೇ ಇರುವುದು | ಲೆವಿ | ಕೆಟಗರಿಯಲ್ಲಿರುವ ಯಾವುದೇ ಒಂದು ಅಥವಾ ಎಲ್ಲಾ ಪ್ರಮುಖವಾದವುಗಳನ್ನು ಅನುಸರಿಸದಿರುವುದರ ಮೇಲೆ | ಎಚ್‌ಎಲ್/ಎಲ್‌ಎಪಿ | 1,000/- |
| | | | | | ಟಾಪ್ ಅಪ್/ ಭದ್ರತೆ ರಹಿತ | 600/- |
| | | | ಸ್ಥಗಿತತೆ | ನಿಗದಿತ ದಿನಾಂಕದಿಂದ ಮುಂದಿನ ಕ್ಯಾಲೆಂಡರ್ ತಿಂಗಳು | - | - |
| 3 | 90 ದಿನಗಳ ಒಳಗೆ ಕೆವೈಸಿ-ಒವಿಡಿ ಸಲ್ಲಿಸದಿರುವುದು (ವಿತರಣೆಯ ಸಮಯದಲ್ಲಿ ಡಿ-ಒವಿಡಿ ಅನ್ನು ಸಲ್ಲಿಸಲಾಗಿರುತ್ತದೆ). | ಮೊದಲ ವಿತರಣೆ ದಿನಾಂಕದಿಂದ 90 ದಿನಗಳು | ಲೆವಿ | ಅನುಸರಣೆ ಮಾಡದಿರುವುದರ ಮೇಲೆ | ಎಚ್‌ಎಲ್/ಎಲ್ ಎಪಿ / ಟಾಪ್ ಅಪ್ / ಭದ್ರತೆ ರಹಿತ | 500/- |
| | | | ಸ್ಥಗಿತತೆ | ನಿಗದಿತ ದಿನಾಂಕದಿಂದ ಮುಂದಿನ ಕ್ಯಾಲೆಂಡರ್ ತಿಂಗಳು | - | - |
| 4 | ಅನ್ವಯವಾಗುವಲ್ಲಿ ರಿ-ಕೆವೈಸಿ ಡಾಕ್ಯುಮೆಂಟ್‌ಗಳನ್ನು ಸಲ್ಲಿಸದಿರುವುದು. | ರಿ-ಕೆವೈಸಿಗಾಗಿ 1ನೇ ಸೂಚನೆಯನ್ನು ಪಡೆದ 90 ದಿನಗಳು | ಲೆವಿ | ಅನುಸರಣೆ ಮಾಡದಿರುವುದರ ಮೇಲೆ | ಎಚ್‌ಎಲ್/ಎಲ್‌ಎಪಿ / ಟಾಪ್ ಅಪ್/ ಭದ್ರತೆ ರಹಿತ | 500/- |
| | | | ಸ್ಥಗಿತತೆ | ನಿಗದಿತ ದಿನಾಂಕದಿಂದ ಮುಂದಿನ ಕ್ಯಾಲೆಂಡರ್ ತಿಂಗಳು | - | - |
| 5 | ಯಾವುದೇ ಡೀಫಾಲ್ಟ್ ಸಂದರ್ಭದಲ್ಲಿ ಲೋನ್ ಒಪ್ಪಂದ ಅಥವಾ ಮಂಜೂರಾತಿ ಪತ್ರದಲ್ಲಿ ವ್ಯಾಖ್ಯಾನಿಸಿದಂತೆ ಯಾವುದೇ | ಮೊದಲ ವಿತರಣೆ ದಿನಾಂಕದಿಂದ 90 ದಿನಗಳು | ಲೆವಿ | ಕೆಟಗರಿಯಲ್ಲಿರುವ ಯಾವುದೇ ಒಂದು ಅಥವಾ ಎಲ್ಲಾ ಪ್ರಮುಖವಾದವುಗಳನ್ನು ಅನುಸರಿಸದಿರುವುದರ ಮೇಲೆ | ಎಚ್‌ಎಲ್/ಎಲ್‌ಎಪಿ | 3,000/- |
| | | | | | ಟಾಪ್ ಅಪ್/ ಭದ್ರತೆ ರಹಿತ | 500/- |

| ಕ್ರ. ಸಂ. | ವಸ್ತು ನಿಯಮಗಳು ಮತ್ತು ಷರತ್ತುಗಳು | ಪ್ರಚೋದಕ ಅಂಶ | ಶುಲ್ಕ ವಿಧಿಸುವಿಕೆ / ಸ್ಥಗಿತಗೊಳಿಸುವಿಕೆ | | ಸಿಪಿಸಿ (ಪ್ರತಿ ತಿಂಗಳಿಗೆ ಶುಲ್ಕ ವಿಧಿಸಲಾಗುತ್ತದೆ) * (ರೂ.) | |
|---|---|---|---|---|---|---|
| | ನಿಯಮ ಮತ್ತು ಷರತ್ತುಗಳು, ಪ್ರಾತಿನಿಧ್ಯಗಳು, ವಾರಂಟಿಗಳು ಅಥವಾ ಒಪ್ಪಂದಗಳನ್ನು ಪಾಲಿಸದಿರುವುದು | | ಸ್ಥಗಿತತೆ | ನಿಗದಿತ ದಿನಾಂಕದಿಂದ ಮುಂದಿನ ಕ್ಯಾಲೆಂಡರ್ ತಿಂಗಳು | - | - |

*ಮೇಲೆ ತಿಳಿಸಲಾದ ಶುಲ್ಕಗಳು ಈ ಎಂಐಟಿಸಿಗೆ ಸಹಿ ಮಾಡುವ ದಿನಾಂಕದಂದು ಅನ್ವಯವಾಗುತ್ತವೆ. ಈ ಶುಲ್ಕಗಳು ಮಾರ್ಪಾಡಿಗೆ ಒಳಪಟ್ಟಿರುತ್ತವೆ ಮತ್ತು ಕಂಪನಿಯ ವೆಬ್‌ಸೈಟ್ (https://www.bajajhousingfinance.in/) ನಲ್ಲಿ ನಮೂದಿಸಿದಂತೆ ಪರಿಷ್ಕೃತ ಶುಲ್ಕಗಳು ಅನ್ವಯವಾಗುತ್ತವೆ. ಮೇಲೆ ತಿಳಿಸಿದ ಎಲ್ಲಾ ಶುಲ್ಕಗಳು ಜಿಎಸ್‌ಟಿ (ಅನ್ವಯವಾದರೆ) ಅಥವಾ ಯಾವುದೇ ಇತರ ಸರ್ಕಾರಿ ಶುಲ್ಕಗಳನ್ನು ಒಳಗೊಂಡಿರುವುದಿಲ್ಲ ಎಂಬುದನ್ನು ಸಾಲಗಾರರು ಒಪ್ಪುತ್ತಾರೆ.

25. ವಿಳಂಬವಾದ ಪಾವತಿಯ ಮೇಲಿನ ಬಡ್ಡಿ- ಬಾಕಿ ಇರುವ ಇಎಂಐ ಮೇಲಿನ ಬಡ್ಡಿಯನ್ನು ಗಡುವು ದಿನಾಂಕದಿಂದ ಪರಿಹಾರದ ದಿನಾಂಕದವರೆಗೆ ಪಾವತಿಸದ ಕಂತುಗಳ ಮೊತ್ತಕ್ಕೆ ವಿಧಿಸಲಾಗುತ್ತದೆ ಮತ್ತು ಹೇಳಿದ ಲೋನ್ ಮೇಲೆ ಅನ್ವಯಿಸುವ ಬಡ್ಡಿ ದರದಲ್ಲಿ ವಿಧಿಸಲಾಗುತ್ತದೆ. ಈ ಬಡ್ಡಿಯನ್ನು ಸಂಯೋಜಿಸಲಾಗುವುದಿಲ್ಲ.

ಮುಂಗಡ ಪಾವತಿ ಶುಲ್ಕಗಳು

| ಫ್ಲೋಟಿಂಗ್ ದರದ ಲೋನ್‌ಗಳು: ವ್ಯಕ್ತಿಗಳು/ ವ್ಯಾಪಾರ ಉದ್ದೇಶಕ್ಕಾಗಿ ಹೊರತುಪಡಿಸಿ ವ್ಯಕ್ತಿಗಳಲ್ಲದವರು | | | |
|---|---|---|---|
| | ಟರ್ಮ್ ಲೋನ್ | ಫ್ಲೆಕ್ಸಿ ಟರ್ಮ್ ಲೋನ್ | ಫ್ಲೆಕ್ಸಿ ಹೈಬ್ರಿಡ್ ಲೋನ್ |
| ಭಾಗಶಃ ಪಾವತಿ ಶುಲ್ಕಗಳು | ಶೂನ್ಯ | ಶೂನ್ಯ | ಶೂನ್ಯ |
| ಪೂರ್ಣ ಪಾವತಿ ಶುಲ್ಕಗಳು | ಶೂನ್ಯ | ಶೂನ್ಯ | ಶೂನ್ಯ |
| ಫ್ಲೋಟಿಂಗ್ ದರದ ಲೋನ್‌ಗಳು: ವ್ಯಾಪಾರ ಉದ್ದೇಶಕ್ಕಾಗಿ ವೈಯಕ್ತಿಕವಾಗಿ / ವ್ಯಕ್ತಿಗಳಲ್ಲದ ಸಂಸ್ಥೆಗೆ<br>ಫಿಕ್ಸೆಡ್ ದರದ ಲೋನ್‌ಗಳು: ಎಲ್ಲಾ ಸಾಲಗಾರರು (ವ್ಯಕ್ತಿಗಳು ಸೇರಿದಂತೆ)** | | | |
| | ಟರ್ಮ್ ಲೋನ್ | ಫ್ಲೆಕ್ಸಿ ಟರ್ಮ್ ಲೋನ್ | ಫ್ಲೆಕ್ಸಿ ಹೈಬ್ರಿಡ್ ಲೋನ್ |
| ಭಾಗಶಃ ಪಾವತಿ ಶುಲ್ಕಗಳು | 2%* ಭಾಗಶಃ ಪಾವತಿ ಮೇಲೆ | ಶೂನ್ಯ | ಶೂನ್ಯ |
| ಪೂರ್ಣ ಪಾವತಿ ಶುಲ್ಕಗಳು | ಅಸಲು ಬಾಕಿ / ಬಾಕಿ ಇರುವ ಫ್ಲೆಕ್ಸಿ ಟರ್ಮ್ ಲೋನ್ ಮಿತಿಯ ಮೇಲೆ 4%* | *%4* ಲಭ್ಯವಿರುವ ಫ್ಲೆಕ್ಸಿ ಲೋನ್ ಮಿತಿ ಮೇಲೆ | ಫ್ಲೆಕ್ಸಿ ಲೋನ್ ಬಡ್ಡಿ ಮಾತ್ರ ಮರುಪಾವತಿ ಅವಧಿಯಲ್ಲಿ ಮಂಜೂರಾದ ಮೊತ್ತದ ಮೇಲೆ 4 *%ಮತ್ತು<br><br>ಫ್ಲೆಕ್ಸಿ ಟರ್ಮ್ ಲೋನ್ ಅವಧಿಯಲ್ಲಿ ಲಭ್ಯವಿರುವ ಫ್ಲೆಕ್ಸಿ ಲೋನ್ ಮಿತಿಯ ಮೇಲೆ 4*% |

* ಪೂರ್ವಪಾವತಿ ಶುಲ್ಕಗಳಿಗೆ ಹೆಚ್ಚುವರಿಯಾಗಿ ಅನ್ವಯವಾಗುವ ಜಿಎಸ್‌ಟಿ ಯನ್ನು ಸಾಲಗಾರರು ಪಾವತಿಸಬೇಕು.

* ಸಾಲಗಾರರು ತಮ್ಮದೇ ಆದ ಮೂಲಗಳಿಂದ ಮುಚ್ಚಿದ ಹೌಸಿಂಗ್ ಲೋನ್‌ಗೆ ಶೂನ್ಯ. ಈ ಉದ್ದೇಶಕ್ಕಾಗಿ "ಸ್ವಂತ ಮೂಲಗಳು" ಎಂದರೆ, ಬ್ಯಾಂಕ್/ ಎಚ್‌ಎಫ್‌ಸಿ/ ಎನ್‌ಬಿಎಫ್‌ಸಿ ಮತ್ತು/ಅಥವಾ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುವುದನ್ನು ಹೊರತುಪಡಿಸಿ ಬೇರೆ ಯಾವುದೇ ಮೂಲ ಎಂದರ್ಥ

ಗಮನಿಸಿ: ಡ್ಯುಯಲ್ ದರದ ಲೋನ್‌ಗಳ ಸಂದರ್ಭದಲ್ಲಿ (ಆರಂಭಿಕ ಅವಧಿಗೆ ಫಿಕ್ಸೆಡ್ ಮತ್ತು ನಂತರ ಫ್ಲೋಟಿಂಗ್‌ಗೆ), ಫೋರ್‌ಕ್ಲೋಸರ್ / ಭಾಗಶಃ ಪಾವತಿ ಶುಲ್ಕಗಳು ಫೋರ್‌ಕ್ಲೋಸರ್ / ಭಾಗಶಃ ಪಾವತಿ ದಿನದ ಪ್ರಕಾರ ಲೋನಿನ ಸ್ಥಿತಿ (ಫಿಕ್ಸೆಡ್ / ಫ್ಲೋಟಿಂಗ್) ಪ್ರಕಾರ ಅನ್ವಯವಾಗುತ್ತವೆ.

ಬಿಎಚ್‌ಎಫ್‌ಎಲ್‌ನಿಂದ ಪಡೆದ ಲೋನ್‌ಗಳನ್ನು ಬಿಸಿನೆಸ್ ಉದ್ದೇಶ ಅಥವಾ ಇತರ ಉದ್ದೇಶಗಳೆಂದು ವರ್ಗೀಕರಿಸಲು ದಯವಿಟ್ಟು ಮೇಲಿನ 'ಲೋನ್‌ನ ಉದ್ದೇಶ' ಎಂಬ ವಿಭಾಗವನ್ನು ಸಹ ನೋಡಿ

ಇದಲ್ಲದೆ, ಈಗಿರುವ ನಿಯಮ ಮತ್ತು ಷರತ್ತುಗಳ ಜೊತೆಗೆ ಈ ಎಲ್ಲಾ ಷರತ್ತುಗಳು ಕೂಡ ಅನ್ವಯವಾಗುತ್ತವೆ:

A. ಮುಂಗಡ ಪಾವತಿಗಾಗಿ ಷರತ್ತುಗಳು

1. ಸಾಲಗಾರರಿಂದ ಮಾಡಿದ ಭಾಗಶಃ ಪಾವತಿ/ ಫೋರ್‌ಕ್ಲೋಸರ್ ಅನ್ನು ಚೆಕ್‌ಗಳು / ಡಿಮ್ಯಾಂಡ್ ಡ್ರಾಫ್ಟ್‌ಗಳ ಮೂಲಕ ಮಾಡುವ ಭಾಗಶಃ ಪಾವತಿ/ ಫೋರ್‌ಕ್ಲೋಸರ್ ಅನ್ನು ಹೊರತುಪಡಿಸಿ ತಿಂಗಳಾದ್ಯಂತ ಪ್ರಸ್ತುತ ತಿಂಗಳ 25 ನೇ ದಿನದಿಂದ ಮುಂದಿನ ತಿಂಗಳ 3ನೇ ದಿನದವರೆಗೆ ಅಂಗೀಕರಿಸಲಾಗುವುದು (ಎರಡೂ ದಿನಗಳನ್ನು ಒಳಗೊಂಡಿದೆ). ಬೇರೆ ಯಾವುದೇ ವಿಧಾನಗಳ ಮೂಲಕ ಪಾವತಿ ಮಾಡುವ ಸಾಲಗಾರರಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.
2. ಫೋರ್‌ಕ್ಲೋಸರ್ ಪತ್ರ ನೀಡಿಕೆ: ಕೋರಿಕೆಯ ದಿನಾಂಕದಿಂದ 21 ದಿನಗಳು.
3. ಫ್ಲೆಕ್ಸಿ ಟರ್ಮ್ ಲೋನ್‌ಗಳು ಮತ್ತು/ಅಥವಾ ಫ್ಲೆಕ್ಸಿ ಹೈಬ್ರಿಡ್ ಲೋನ್‌ಗಳಲ್ಲಿ ಭಾಗಶಃ ಮುಂಗಡ ಪಾವತಿ ಶುಲ್ಕಗಳು ಇರುವುದಿಲ್ಲ.

   ಈ ಎಂಐಟಿಸಿ , ಲೋನಿನ ಕೆಲವು ಪ್ರಮುಖ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ ಹಾಗೂ ಸಾಲಗಾರರಿಂದ ಸ್ವೀಕರಿಸಿದ ಯಾವುದೇ ಎಂಐಟಿಸಿ ಯನ್ನು ಇದು ಉತ್ಕ್ರಮಿಸುತ್ತದೆ ಎಂದು ಈ ಮೂಲಕ ಒಪ್ಪಿಕೊಳ್ಳಲಾಗಿದೆ. ಜೊತೆಗೆ, ಲೋನ್ ಒಪ್ಪಂದದ ನಿಯಮಗಳು ಮತ್ತು ಅವರು ಕಾರ್ಯರೂಪಕ್ಕೆ ತಂದಿರುವ/ತರಲಿರುವ ಇತರೆ ಸೆಕ್ಯೂರಿಟಿ ಡಾಕ್ಯುಮೆಂಟ್‌ಗಳಿಗೆ ಬದ್ಧವಾಗಿರಲು ಮತ್ತು ಅವುಗಳನ್ನು ಉಲ್ಲೇಖಿಸಲು ಈ ಮೂಲಕ ಪಾರ್ಟಿಗಳು ಯಾವುದೇ ತಕರಾರಿಲ್ಲದೆ ಒಪ್ಪಿಕೊಂಡಿರುತ್ತಾರೆ.

ಸಾಲಗಾರನು ಅತ್ಯಂತ ಪ್ರಮುಖವಾದ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರುವ ಎಲ್ಲಾ 19 ಪುಟಗಳನ್ನು ಓದಿದ್ದೇನೆ ಮತ್ತು ಅರ್ಥಮಾಡಿಕೊಂಡಿದ್ದಾನೆ ಎಂದು ಒಪ್ಪಿಕೊಳ್ಳುತ್ತಾನೆ ಮತ್ತು ಎಂಐಟಿಸಿ ಯ ಮೊದಲ ಮತ್ತು ಕೊನೆಯ ಪುಟದಲ್ಲಿ ಆತ/ ಆಕೆಯ / ಅವರ ಸಹಿ / ಸಾಮಾನ್ಯ ಮುದ್ರೆಯನ್ನು ಹಾಕುತ್ತಾನೆ. ಸಾಲಗಾರನು ಎಂಐಟಿಸಿ ಯ ಪ್ರತಿ ಪುಟದಲ್ಲಿ ಸಹಿ ಮಾಡುವ ಅಗತ್ಯವಿಲ್ಲ ಮತ್ತು ಎಂಐಟಿಸಿ ಯ ಮೊದಲ ಮತ್ತು ಕೊನೆಯ ಪುಟದಲ್ಲಿನ ಸಹಿ ಸಾಕಾಗುತ್ತದೆ ಎಂದು ಸಾಲಗಾರನು ಒಪ್ಪಿಕೊಳ್ಳುತ್ತಾನೆ ಮತ್ತು ದೃಢೀಕರಿಸುತ್ತಾನೆ.

ಮೇಲಿನ ನಿಯಮ ಮತ್ತುಷರತ್ತುಗಳನ್ನು ಸಾಲಗಾರ/ರು ಓದಿದ್ದಾರೆ, ಅಥವಾ ಬಿಎಚ್‌ಎಫ್‌ಎಲ್ ನ ಶ್ರೀ/ಶ್ರೀಮತಿ/ಕುಮಾರಿ ________________________ ಅವರಿಂದ ಓದಿಸಿ, ಅದನ್ನು ಸಾಲಗಾರರು ಅರ್ಥಮಾಡಿಕೊಂಡಿದ್ದಾರೆ.

***ಒಂದು ವೇಳೆ ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆಗಳ ನಡುವೆ ಯಾವುದೇ ರೀತಿಯ ಹೊಂದಾಣಿಕೆ ಇಲ್ಲದಿದ್ದರೆ, ಇಂಗ್ಲೀಷ್ ಭಾಷೆಯನ್ನೇ ಅಂತಿಮವೆಂದು ಪರಿಗಣಿಸಲಾಗುತ್ತದೆ.*

⊗

**(ಸಾಲಗಾರರ ಸಹಿ ಅಥವಾ ಹೆಬ್ಬೆಟ್ಟಿನ ಗುರುತು)**

**ಸಾಲಗಾರರ ಹೆಸರು:**

⊗

**(ಬಿಎಚ್ಎಫ್ಎಲ್ ನ  ಅಧಿಕೃತ ಪ್ರತಿನಿಧಿಯ ಸಹಿ)**

**ಅಧಿಕೃತ ಸಹಿದಾರರ ಹೆಸರು**

**ದಿನಾಂಕ** **ಜಾಗ**

ಗಮನಿಸಿ: ಎಂಐಟಿಸಿ  ನಕಲಿ ಪ್ರತಿಯನ್ನು ಸಾಲಗಾರನಿಗೆ/ರಿಗೆ ನೀಡಬೇಕು